ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶನಿವಾರ, ಫೆಬ್ರವರಿ 22, 2025

ಸಂಪುಟ : 51 ಸಂಚಿಕೆ : 281 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com

## ಪಕ್ಷಕ್ಕೆ ಮಾರಕವಾಗುವ ಹೇಳಿಕೆ ನಿಲ್ಲಿಸಿ



**ಸಚಿವ, ಶಾಸಕರಿಗೆ ಖರ್ಗೆ ಖಡಕ್ ಎಚ್ಚರಿಕೆ**

ಬೆಂಗಳೂರು, ಫೆ. 21 - ಪಕ್ಷಕ್ಕೆ ಮಾರಕ ಆಗುವಂತಹ ಹೇಳಿಕೆಗಳನ್ನು ನಿಲ್ಲಿಸದಿದ್ದರೆ ಮಂತ್ರಿ ಸ್ಥಾನ ತೊರೆದು ಮನೆಗೆ ಹೋಗಿ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕರ್ನಾಟಕದ ಕೆಲವು ಸಚಿವರುಗಳಿಗೆ ಖಡಕ್ ಎಚ್ಚರಿಕೆ ನೀಡಿದ್ದಾರೆ.

ಅಧಿಕಾರ ಹಂಚಿಕೆ ಹಾಗೂ ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ವಿಚಾರಕ್ಕೆ ಸಂಬಂಧಿಸಿದಂತೆ ಸದಾ ಹೇಳಿಕೆ ನೀಡಿ, ಸರ್ಕಾರ ಮತ್ತು ಪಕ್ಷಕ್ಕೆ ಮುಜುಗರ ಮಾಡುತ್ತಿರುವ ಸಚಿವರಾದ ಡಾ.ಜಿ.ಪರಮೇಶ್ವರ್, ಕೆ.ಎನ್. ರಾಜಣ್ಣ, ಡಾ.ಹೆಚ್.ಸಿ.ಮಹದೇವಪ್ಪ ಹಾಗೂ ಸತೀಶ್ ಜಾರಕಿಹೊಳಿ ಅವರುಗಳಿಗೆ ಖರ್ಗೆ ಈ ಸಂದೇಶ ರವಾನೆ ಮಾಡಿದ್ದಾರೆ.

ಸಚಿವರಿಗಷ್ಟೇ ಅಲ್ಲ, ಕೆಲವು ಶಾಸಕರಿಗೂ ಎಐಸಿಸಿಯಿಂದ ಎಚ್ಚರಿಕೆ ರವಾನೆ ಆಗಿದೆ. ಇನ್ನು ಮುಂದೆ ಯಾವುದೇ ಸಚಿವರು ಹಾಗೂ ಶಾಸಕರು ಅನಗತ್ಯ ಹೇಳಿಕೆ ನೀಡಿದರೆ, ಅಂತಹವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಸಿದ್ದಾರೆ. ಈ ಹಿಂದೆ ಶಿವಕುಮಾರ್ ವಿರುದ್ಧ ಸತತವಾಗಿ ಹೇಳಿಕೆ ನೀಡಿದ್ದಲ್ಲದೆ, ಪರಿಶಿಷ್ಟ ಜಾತಿ ಮತ್ತು ಪಂಗಡದ ಶಾಸಕರ ಸಭೆ ಹಾಗೂ ಬೃಹತ್ ಸಮಾವೇಶ ನಡೆಸಲು ಮುಂದಾದಾಗಲೇ ಈ ಸಚಿವರುಗಳಿಗೆ ಖರ್ಗೆ, ಬಾಯಿ ಮುಚ್ಚಿಕೊಂಡು ಕೊಟ್ಟಿರುವ ಕೆಲಸ ಮಾಡಿ ಎಂದಿದ್ದರು.

ಮತ್ತೆ ಇದೇ ಚಾಳಿ ಪುನರಾವರ್ತನೆಯಾದಾಗ ಬೆಳಗಾವಿಯ ಎಐಸಿಸಿ ಅಧಿವೇಶನದ ವೇಳೆ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, ಇಂತಹ ಒಂದಿಬ್ಬರು ಸಚಿವರನ್ನು ಸಂಪುಟದಿಂದ ಹೊರಹಾಕಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸೂಚಿಸಿದ್ದರು. ಇದಾದ ನಂತರವೂ ಡಾ. ಪರಮೇಶ್ವರ್ ಅವರ ವಿಧಾನಸೌಧದ ಕಚೇರಿಯಲ್ಲಿ ಈ ಸಚಿವರುಗಳು ಗೌಪ್ಯ ಸಭೆ ನಡೆಸಿದ್ದರು. ಸಭೆಯ ನಂತರದ ದಿನಗಳಲ್ಲಿ ಕೆಪಿಸಿಸಿ ಅಧ್ಯಕ್ಷರ (4ನೇ ಪುಟಕ್ಕೆ)

## ಫೈನಾನ್ಸ್ : ನಿಯಮಬದ್ಧವಾಗಿ ವ್ಯವಹರಿಸಿ

### ಮಾ.12ರೊಳಗೆ ನೋಂದಾಯಿಸಿಕೊಳ್ಳಲು ಜಿಲ್ಲಾಧಿಕಾರಿ ಗಡುವು

**ಮೈಕ್ರೋ ಫೈನಾನ್ಸ್, ಎನ್‌ಬಿಎಫ್‌ಸಿ, ಲೇವಾದೇವಿ, ಗಿರವಿದಾರದೊಂದಿಗಿನ ಸಭೆಯಲ್ಲಿ ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ**

ದಾವಣಗೆರೆ, ಫೆ.21- ಮೈಕ್ರೋ ಫೈನಾನ್ಸ್, ಬ್ಯಾಂಕೇತರ ಹಣಕಾಸು ಸಂಸ್ಥೆಗಳು ಮತ್ತು ಲೇವಾದೇವಿ, ಗಿರವಿದಾರರು ನಿಯಮಬದ್ದವಾಗಿ ವ್ಯವಹಾರ ಮಾಡಬೇಕು. ಸಾಲ ಕಟ್ಟಿಸಿಕೊಳ್ಳುವಾಗ ಬಲವಂತದ ಕ್ರಮಕ್ಕೆ ಮುಂದಾಗಬಾರದು ಎಂದು ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಸೂಚನೆ ನೀಡಿದರು.

ಅವರು, ಶುಕ್ರವಾರ ಜಿಲ್ಲಾ ಪೊಲೀಸ್ ಅಧೀಕ್ಷಕರ ಕಚೇರಿಯಲ್ಲಿ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ, ಕಾಯ್ದೆಯನ್ವಯ ಎಲ್ಲಾ ಹಣಕಾಸು ಸಂಸ್ಥೆಯವರು ಮಾರ್ಚ್ 12 ರೊಳಗಾಗಿ ಆಯಾ ಜಿಲ್ಲಾಧಿಕಾರಿಗಳಿಂದ ನೋಂದಣಿ ಮಾಡಿಸಿಕೊಂಡು, ನಿಯಮಬದ್ದವಾಗಿ ವ್ಯವಹಾರ ಮಾಡಲು ಆದೇಶ ಮಾಡಲಾಗಿದ್ದು, ಆದೇಶ ಪಾಲಿಸವಂತೆ ಸೂಚಿಸಿದರು.

ಹೊಸ ಕಾಯ್ದೆಯಡಿ ಸಾಲ ನೀಡಿಕೆಯ ಎಲ್ಲಾ ಒಡಂಬಡಿಕೆ ಪತ್ರಗಳನ್ನು ಸ್ಥಳೀಯ ಭಾಷೆ ಕನ್ನಡದಲ್ಲಿ ಮುದ್ರಣ ಮಾಡಿ ಎಲ್ಲಾ ಷರತ್ತುಗಳ ಸಂಪೂರ್ಣ ವಿವರ, ಸಾಲ ಪಡೆಯುವವರಿಗೆ ಮಾಹಿತಿ ನೀಡಬೇಕು. ಸಾಮರ್ಥ್ಯವನ್ನಾಧರಿಸಿ ಸಾಲ ನೀಡಬೇಕು. ಫೈನಾನ್ಸ್ ನವರು ಯಾವುದೇ ಅಡಮಾನಗಳನ್ನು ಪಡೆಯದೇ ಸಾಲ ನೀಡಬೇಕು. ಸಾಲ ಪಡೆಯುವಾಗ ಅನೇಕ ಸಹಿಗಳನ್ನು ಪಡೆಯುವುದು, ಸಾಲ ತೀರಿಸಿದ್ದರೂ ಇನ್ನೂ ಕಂತುಗಳು ಬಾಕಿ ಇವೆ, ಸಾಲ ಕಟ್ಟದಿದ್ದಾಗ ಅವರ ಮನೆ ಬಾಗಿಲಿಗೆ ತೆರಳಿ ಅವಾಚ್ಯ ಶಬ್ದಗಳಿಂದ ನಿಂದಿಸುವುದಕ್ಕೆ ಕಾನೂನಿನಲ್ಲಿ ಅವಕಾಶ ಇಲ್ಲ ಎಂದರು.

ನಾನ್ ಬ್ಯಾಂಕಿಂಗ್ ಹಣಕಾಸು ಸಂಸ್ಥೆಯವರು ವಾಹನಗಳ ಮೇಲೆ ಸಾಲ ನೀಡಿ ಅವರು ಒಂದು ಕಂತು ಕಟ್ಟಲು ವಿಫಲವಾದರೂ ವಾಹನ ವಶಕ್ಕೆ ಪಡೆದು ಬೇರೆಯವರಿಗೆ ಮಾರಾಟ ಮಾಡಿರುವ ಅನೇಕ ಪ್ರಕರಣಗಳಿವೆ. ಆದರೆ ಯಾವುದೇ ಸಂಸ್ಥೆಗಳಿಗೆ ಸೀಜ್ ಮಾಡುವ ಅಧಿಕಾರ ಇಲ್ಲ, ನ್ಯಾಯಾಲಯದ ಮೂಲಕ ಮುಟ್ಟುಗೋಲಿಗೆ ಆದೇಶ ಪಡೆದ ನಂತರವೇ, ಅಂತಹ ವಾಹನಗಳನ್ನು ಮುಟ್ಟುಗೋಲು ಹಾಕಿ, ಹರಾಜು ಮೂಲಕ ವಿಲೇ ಮಾಡಬಹುದು ಎಂದರು.

ಓರ್ವ ಸಂಸ್ಥೆ ಟ್ರ್ಯಾಕ್ಟರ್‌ಗೆ ಸಾಲ ನೀಡಿದ್ದು, ರೈತ 7 ಲಕ್ಷದಲ್ಲಿ 5 ಲಕ್ಷ ಸಾಲವನ್ನು ಮರುಪಾವತಿಸಿದ್ದರೂ ಅದನ್ನು ವಶಕ್ಕೆ ಪಡೆದು ಬೇರೆಯವರಿಗೆ ಮಾರಾಟ ಮಾಡಿದ ಪ್ರಕರಣ ದಾವಣಗೆರೆಯಲ್ಲಿ ಕಂಡುಬಂದಿದೆ. ಆ ಸಂಸ್ಥೆಯಿಂದಲೇ ರೈತನಿಗೆ ಟ್ರ್ಯಾಕ್ಟರ್ ಕೊಡಿಸುವ ಕೆಲಸವನ್ನು ಮಾಡಲಾಗುತ್ತದೆ ಎಂದ ಅವರು ಯಾವುದೇ ಹಣಕಾಸು ಸಂಸ್ಥೆಯಾಗಿರಲಿ, ಈ ಜಿಲ್ಲೆಯಲ್ಲಿ ವ್ಯವಹರಿಸುತ್ತಿದ್ದಲ್ಲಿ ಪ್ರಾದೇಶಿಕ ಕಚೇರಿ ಹೊಂದುವುದು ಕಡ್ಡಾಯವಾಗಿದೆ ಎಂದರು.

ಸಾಲಗಾರರಿಗೆ ಕಿರುಕುಳ, ಮಾನಸಿಕ ಒತ್ತಡ ನೀಡಿದಲ್ಲಿ (4ನೇ ಪುಟಕ್ಕೆ)

## ರಾಜ್ಯದ ಮೀಸಲಾತಿ ಪ್ರಮಾಣ ಹೆಚ್ಚಲಿ

### ಛತ್ರಪತಿ ಶಿವಾಜಿ ಜಯಂತ್ಯುತ್ಸವದಲ್ಲಿ ಸಚಿವ ಸಂತೋಷ್ ಲಾಡ್ ಒತ್ತಾಯ




ದಾವಣಗೆರೆ, ಫೆ.21- ರಾಜ್ಯದಲ್ಲಿರುವ ಮೀಸಲಾತಿ ಪ್ರಮಾಣವನ್ನು ಶೇ.75ಕ್ಕೆ ಹೆಚ್ಚಳ ಮಾಡಬೇಕು. ಇದರಿಂದ ಮರಾಠ ಸೇರಿದಂತೆ ಇತರೆ ಸಣ್ಣ, ಪುಟ್ಟ ಸಮುದಾಯಗಳಿಗೂ ಮೀಸಲಾತಿ ಸಿಗಲಿದೆ ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಹೇಳಿದರು.

ಕ್ಷತ್ರಿಯ ಮರಾಠ ವಿದ್ಯಾವರ್ಧಕ ಸಂಘದ ವತಿಯಿಂದ ನಗರದ ಶ್ರೀ ಡಿ. ದೇವರಾಜ ಅರಸು ಬಡಾವಣೆ 'ಬಿ' ಬ್ಲಾಕ್‌ನಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀ ಭವಾನಿ ಕಲ್ಯಾಣ ಮಂಟಪದ ಉದ್ಘಾಟನೆ ಹಾಗೂ ಛತ್ರಪತಿ ಶ್ರೀ ಶಿವಾಜಿ ಮಹಾರಾಜರ ಜಯಂತ್ಯೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ತಮಿಳುನಾಡು ಸರ್ಕಾರದ ಮಾದರಿಯಲ್ಲಿ ರಾಜ್ಯ ಸರ್ಕಾರವು ಮೀಸಲಾತಿ ಪ್ರಮಾಣವನ್ನು ಶೇ.75ಕ್ಕೆ ಹೆಚ್ಚಿಸಬೇಕು ಎಂದು ಒತ್ತಾಯಿಸಿದ ಅವರು, ನಾನು ಮೀಸಲಾತಿ ಪ್ರಮಾಣ ಹೆಚ್ಚಳ ಮಾಡುವುದರ ಪರ ಇದ್ದೇನೆ ಎಂದು ತಿಳಿಸಿದರು.

ಶಾಹು ಮಹಾರಾಜರು ಅಂಬೇಡ್ಕರ್ ಅವರನ್ನು ಓದಿಸದಿದ್ದರೆ, ಅವರು ಸಂವಿಧಾನ ಬರೆಯಲು ಸಾಧ್ಯವಾಗುತ್ತಿರಲಿಲ್ಲ. ಸಂವಿಧಾನದಲ್ಲಿ ಹಿಂದೂ ಕೋಡ್ ಬಿಲ್ ತರದೇ ಹೋಗಿದ್ದರೆ ಹೆಣ್ಣು ಮಕ್ಕಳಿಗೆ ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲು ಸಿಗುತ್ತಿರಲಿಲ್ಲ ಎಂದರು.

ಶಿವಾಜಿ ಸಲಹೆಗಾರ ಮುಸ್ಲಿಂ ಆಗಿದ್ದರು. ಮರಾಠ ಮತ್ತು ಶಿವಾಜಿ ಮಹಾರಾಜರು ಮುಸ್ಲಿಂ ವಿರೋಧಿಯಲ್ಲ. ಹೀಗೆ ಹೇಳುವವರು ಯಾರೂ ಇತಿಹಾಸ ಓದಿಲ್ಲ. ಸಾಮಾಜಿಕ ಜಾಲತಾಣದಲ್ಲಿ ಬರುವುದನ್ನು (4ನೇ ಪುಟಕ್ಕೆ)

> ಅಂಬೇಡ್ಕರ್ ಪರಿಶಿಷ್ಟರಿಗೆ ಮಾತ್ರ ಸೀಮಿತ ಎಂಬ ಭಾವನೆ ತಪ್ಪು. ಅವರು ಎಸ್ಸಿ-ಎಸ್ಟಿಗಳಿಗೆ ಶೇ.15ರಷ್ಟು ಮೀಸಲಾತಿ ಕಲ್ಪಿಸಿದ್ದರೆ, ಹಿಂದುಳಿದ ವರ್ಗಗಳಿಗೆ ಶೇ.29ರಷ್ಟು ಮೀಸಲು ನೀಡಿದ್ದಾರೆ.
>
> - ಪಿ.ಜಿ.ಆರ್. ಶಿಂಧ್ಯಾ, ಮಾಜಿ ಸಚಿವ

> ಪಿ.ಜಿ.ಆರ್. ಶಿಂಧ್ಯಾ ಬೇರೆ ಪಕ್ಷದಲ್ಲಿ ಇದ್ದಿದ್ದರೆ ಮುಖ್ಯಮಂತ್ರಿಯಾಗುತ್ತಿದ್ದರು. ಆದರೆ, ಅವರ ಪಕ್ಷದಲ್ಲಿ ಅವರಿಗೆ ಅವಕಾಶ ಸಿಗಲಿಲ್ಲ. ಕಾರ್ಮಿಕ ಸಚಿವ ಸಂತೋಷ್ ಲಾಡ್ ಮುಂದಿನ ದಿನಗಳಲ್ಲಿ ನಾಡಿನ ದೊರೆ ಆಗಬಹುದು.
>
> - ಹೆಚ್. ಆಂಜನೇಯ, ಮಾಜಿ ಸಚಿವ

## 498ಎ ಸೆಕ್ಷನ್ ಅನ್ವಯಕ್ಕೆ ವರದಕ್ಷಿಣೆ ಬೇಡಿಕೆ ಕಡ್ಡಾಯವಲ್ಲ

**ಸುಪ್ರೀಂ ಕೋರ್ಟ್**

ನವದೆಹಲಿ, ಫೆ. 21 - ಐಪಿಸಿ ಸೆಕ್ಷನ್ 498ಎ ಅನ್ವಯ ಪತಿಯ ವಿರುದ್ಧ ಹಿಂಸಾಚಾರ ಪ್ರಕರಣ ದಾಖಲಿಸಲು ವರದಕ್ಷಿಣೆ ಬೇಡಿಕೆ ಇರಲೇಬೇಕು ಎಂಬುದು ಕಡ್ಡಾಯವಲ್ಲ ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ.

ನ್ಯಾಯಮೂರ್ತಿಗಳಾದ ವಿಕ್ರಂ ನಾಥ್ ಹಾಗೂ ಪ್ರಸನ್ನ ಬಿ. ವರಾಳೆ ಅವರನ್ನು ಒಳಗೊಂಡ ಪೀಠ ಈ ನಿಲುವು ತಳೆದಿದೆ. 498ಎ ಸೆಕ್ಷನ್ ರೂಪಿಸಿರುವುದೇ ಹಿಂಸಾಚಾರ ತಡೆಯುವ ಉದ್ದೇಶದಿಂದ. ಈ ಸೆಕ್ಷನ್ ಅನ್ವಯ ಪತಿ ಹಾಗೂ ಅತ್ತೆ - ಮಾವಂದಿರ ವಿರುದ್ಧ ಪ್ರಕರಣ ದಾಖಲಿಸಲು ವರದಕ್ಷಿಣೆ ಬೇಡಿಕೆ ಮುಂದಿಟ್ಟಿರಲೇ ಬೇಕು ಎಂದಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ವರದಕ್ಷಿಣೆ ಬೇಡಿಕೆ ರಹಿತವಾಗಿ ಹಿಂಸಾಚಾರ ನಡೆದಿದ್ದರೂ, ಐಪಿಸಿ ಸೆಕ್ಷನ್ 498ಎ ದಾಖಲಿಸಬಹುದು ಎಂದು ಪೀಠ ಹೇಳಿದೆ. ಉದ್ದೇಶಪೂರ್ವಕವಾಗಿ ದೈಹಿಕ ಹಾನಿ ಇಲ್ಲವೇ ಮಾನಸಿಕ ಹಾನಿ ಮಾಡುವುದು ಇಲ್ಲವೇ ಕಾನೂನು ಬಾಹಿರವಾದ ಬೇಡಿಕೆಗಳಿಗೆ ಮಹಿಳೆ ಹಾಗೂ ಅವರ ಕುಟುಂಬದವರನ್ನು ಬಲವಂತ ಪಡಿಸುವುದು ನಡೆದಾಗ 498 ಎ ಸೆಕ್ಷನ್ ಅನ್ವಯವಾಗುತ್ತದೆ ಎಂದು ಪೀಠ ತಿಳಿಸಿದೆ.

1983 ರಲ್ಲಿ ಪತಿ ಇಲ್ಲವೇ ಪತಿಯ ಸಂಬಂಧಿಗಳಿಂದ ಮಹಿಳೆಗೆ ಹಿಂಸೆ ನೀಡುವುದಕ್ಕೆ ಸಂಬಂಧಿಸಿದಂತೆ 498 ಎ ಸೆಕ್ಷನ್ ಜಾರಿಗೆ ತರಲಾಗಿತ್ತು. ಪತಿ ಹಾಗೂ ಪತಿಯ ಮನೆಯವರ ಕಿರುಕುಳದಿಂದ ಮಹಿಳೆಯನ್ನು ರಕ್ಷಿಸಲು ಈ ಕ್ರಮ ತೆಗೆದುಕೊಳ್ಳಲಾಗಿತ್ತು.

ಆಂಧ್ರಪ್ರದೇಶದ ಮಹಿಳೆಯೊಬ್ಬರು ಗಂಡ ಹಾಗೂ ಇತರರ ವಿರುದ್ಧ 498 ಎ ಸೆಕ್ಷನ್ ಅನ್ವಯ ಪ್ರಕರಣ ದಾಖಲಿಸಿದ್ದರು. ಆದರೆ ಈ ಪ್ರಕರಣದಲ್ಲಿ ವರದಕ್ಷಿಣೆ ಬೇಡಿಕೆ ಕಂಡುಬಂದಿಲ್ಲ ಎಂಬ ಕಾರಣಕ್ಕಾಗಿ ಆಂಧ್ರ ಪ್ರದೇಶ ಹೈಕೋರ್ಟ್ ಎಫ್‌ಐಆರ್ ರದ್ದುಗೊಳಿಸಿತ್ತು. ನಂತರ ಪ್ರಕರಣ ಸುಪ್ರೀಂಕೋರ್ಟ್ ಮೆಟ್ಟಿಲೇರಿತ್ತು.

## ಎಪಿಎಂಸಿಯಲ್ಲಿನ ಚೌಕಿಪೇಟೆ ವ್ಯಾಪಾರಿಗಳ ಮಳಿಗೆ ಮುಟ್ಟುಗೋಲು : ಜಿಲ್ಲಾಧಿಕಾರಿ



ದಾವಣಗೆರೆ, ಫೆ. 21- ನಗರದ ಚೌಕಿಪೇಟೆಯ ವ್ಯಾಪಾರಸ್ಥರಿಗೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಿಂದ ನೀಡಿರುವ ಮಳಿಗೆಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಹೇಳಿದ್ದಾರೆ.

ಶುಕ್ರವಾರ ಎಸ್ಪಿ ಕಚೇರಿಯಲ್ಲಿ ನಡೆದ ರಸ್ತೆ ಸುರಕ್ಷತಾ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ಹಳೆ ದಾವಣಗೆರೆ ಭಾಗದಲ್ಲಿ ವಾಹನ ದಟ್ಟಣೆಯಿಂದ ಸಾಕಷ್ಟು ಸಮಸ್ಯೆಗಳು ಉದ್ಭವಿಸುತ್ತಿವೆ. ಲೋಡಿಂಗ್ ಅನ್‌ಲೋಡಿಂಗ್ ನಿಂದಾಗಿ ಸಮಸ್ಯೆ ಸಾಕಷ್ಟು ಬಿಗಡಾಯಿಸಿದೆ ಎಂದರು.

ಸಂಚಾರ ದಟ್ಟಣೆ ನಿಯಂತ್ರಣಕ್ಕಾಗಿ ವ್ಯಾಪರಸ್ಥರಿಗೆ ಮಳಿಗೆ ನೀಡಲಾಗಿತ್ತು. ಆದರೆ ಅವುಗಳನ್ನು ಬಳಕೆ ಮಾಡಿಕೊಳ್ಳದೇ ಆನ್‌ಲೋಡಿಂಗಿಗೆ ಲಾರಿಯನ್ನು ನೇರವಾಗಿ ಚೌಕಿಪೇಟೆಗೆ ತರುತ್ತಿದ್ದಾರೆ. ಪರಿಣಾಮ ವ್ಯವಸ್ಥೆ ಹದಗೆಡುತ್ತಿದೆ. ಈ ಹಿನ್ನೆಲೆಯಲ್ಲಿ ಮುಂದಿನ 15 ದಿನಗಳಲ್ಲಿ ನೀಡಿರುವ ಎಲ್ಲ ಮಳಿಗೆಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಎಂದು ಹೇಳಿದರು.

ಲಾರಿ ಮಾಲೀಕರ ಸಂಘದ ಬಹುದಿನಗಳ ಬೇಡಿಕೆಯಾಗಿದ್ದ ಟ್ರಕ್ ಟರ್ಮಿನಲ್ ನಿರ್ಮಾಣಕ್ಕೆ ಬಾಡಾ ತಿರುವಿನಲ್ಲಿ 5 ಎಕರೆ ಸರ್ಕಾರಿ ಜಾಗ ಅಂತಿಮಗೊಳಿಸಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವರೊಂದಿಗೆ ಮಾತನಾಡಿ, ಈ ಜಾಗವನ್ನು ಅಂತಿಮಗೊಳಿಸಿ ಟ್ರಕ್ ಟರ್ಮಿನಲ್‌ಗೆ ಈ ಜಾಗ ನೀಡಲಾಗುವುದು ಎಂದು ಹೇಳಿದರು.

ಇದಕ್ಕೂ ಮುನ್ನ ಲಾರಿ ಮಾಲಿಕರ ಸಂಘದ ಅಧ್ಯಕ್ಷ ಸೈಯದ್ ಸೈಫುಲ್ಲಾ (4ನೇ ಪುಟಕ್ಕೆ)

### ಹಳೆಭಾಗಕ್ಕೆ ಆಟೋ ಸಂಚಾರ ನಿಷೇಧ: ಡಿಸಿ

**ನಗರದ ಹಳೆ ಭಾಗದಲ್ಲಿ ಸಂಚಾರ ವ್ಯವಸ್ಥೆಗೆ ತೀವ್ರ ಸವಾಲಾಗಿರುವ ಆಟೋಗಳಿಗೆ ಆ ಭಾಗಕ್ಕೆ ಹೋಗದಂತೆ ಶೀಘ್ರುವೇ ಕ್ರಮ ಕೈಗೊಳ್ಳಲಾವುದು ಎಂದು ಜಿಲ್ಲಾಧಿಕಾರಿ ಗಂಗಾಧರ ಸ್ವಾಮಿ ಹೇಳಿದರು. ಮುಂಜಾನೆ 6 ಗಂಟೆಯ ವೇಳೆಗೆ ಹಳೆ ದಾವಣಗೆರೆಗೆ ಹೋಗುವುದು ಕಷ್ಟವಾಗಿದೆ. ಸ್ವತಃ ನಾನೇ ಈ ಸಮಸ್ಯೆಯನ್ನು ಅನುಭವಿಸಿದ್ದೇನೆ. ಆಟೋ ಚಾಲಕರು ತಮ್ಮ ವರ್ತನೆಯನ್ನು ತಿದ್ದಿಕೊಳ್ಳುವ ವಿಶ್ವಾಸ ಇತ್ತು. ಆದರೆ ನನ್ನ ನಿರೀಕ್ಷೆ ಹುಸಿಯಾಗಿದೆ. ಹಾಗಾಗಿ ಶೀಘ್ರುವೇ ದಾವಣಗೆರೆಯ ಹಳೆಭಾಗದಲ್ಲಿ ಆಟೋ ಸಂಚಾರ ನಿಷೇಧಿಲಾಗುವುದು ಎಂದು ಹೇಳಿದರು.**

## ಅಸ್ಸಾಂ ವಿಧಾನಸಭೆಯಲ್ಲಿ ನಮಾಜ್ ಬಿಡುವಿಗೆ ತೆರೆ

ಗುವಾಹತಿ, ಫೆ. 21 - 90 ವರ್ಷಗಳ ನಂತರ ಅಸ್ಸಾಂ ವಿಧಾನಸಭೆಯಲ್ಲಿ ಶುಕ್ರವಾರದ ನಮಾಜ್ ವೇಳೆ ನೀಡಲಾಗುತ್ತಿದ್ದ ಎರಡು ಗಂಟೆಯ ಬಿಡುವಿಗೆ ತೆರೆ ಎಳೆಯಲಾಗಿದೆ. ಮುಸ್ಲಿಂ ಶಾಸಕರು ನಮಾಜ್ ಮಾಡಲು ಈ ಬಿಡುವು ನೀಡಲಾಗುತ್ತಿತ್ತು. ಕಳೆದ ವರ್ಷ ಆಗಸ್ಟ್ ತಿಂಗಳಲ್ಲೇ ಈ ಬಗ್ಗೆ ನಿರ್ಧಾರ ತೆಗೆದುಕೊಳ್ಳಲಾಗಿತ್ತು. ಆದರೆ ಪ್ರಸಕ್ತ ಬಜೆಟ್ ಅಧಿವೇಶನದಲ್ಲಿ ನಿರ್ಧಾರವನ್ನು ಜಾರಿಗೆ ತರಲಾಗಿದೆ.

ಈ ಬಗ್ಗೆ ಮಾತನಾಡಿರುವ ಎಐಯುಡಿಎಫ್ ಶಾಸಕ ರಫೀಕುಲ್ ಇಸ್ಲಾಂ, ಸದನದಲ್ಲಿ 30 ಮುಸ್ಲಿಂ ಶಾಸಕರಿದ್ದೇವೆ. ನಾವು ನಮ್ಮ ನಿಲುವನ್ನು ತಿಳಿಸಿದ್ದೇವೆ. ಆದರೆ ಸಂಖ್ಯಾಬಲದಿಂದಾಗಿ ಬಿಜೆಪಿ ಈ ನಿರ್ಧಾರ ಹೇರಿಕೆ ಮಾಡಿದೆ ಎಂದಿದ್ದಾರೆ.

ಈ ಬಗ್ಗೆ ಮಾತನಾಡಿರುವ ವಿರೋಧ ಪಕ್ಷವಾದ ಕಾಂಗ್ರೆಸ್ ನಾಯಕ ದೇವವ್ರತ ಸೈಕಿಯಾ, ಇಂದು ನಮ್ಮ ಪಕ್ಷದ ಹಲವು ಸಹೋದ್ಯೋಗಿಗಳು ಹಾಗೂ ಎಐಯುಡಿಎಫ್ ಶಾಸಕರು ನಮಾಜ್ ಮಾಡಲು ತೆರಳಿದ ಕಾರಣ ಪ್ರಮುಖ ಚರ್ಚೆಯಿಂದ ವಂಚಿತರಾಗಿದ್ದಾರೆ. ಶುಕ್ರವಾರ ಮಾತ್ರ ವಿಶೇಷ ಪ್ರಾರ್ಥನೆ ಸಲ್ಲಿಸುವ ಕಾರಣ ಇದಕ್ಕೆ ಹತ್ತಿರದಲ್ಲೇ ವ್ಯವಸ್ಥೆ ಮಾಡಬಹುದು ಎಂದರು.

ವಿಧಾನಸಭಾಧ್ಯಕ್ಷ ಬಿಸ್ವಜಿತ್ ದೈಮಾರೆ ಮಾತನಾಡಿ, ಸಂವಿಧಾನದ ಸೆಕ್ಯುಲರ್ ಸ್ವರೂಪದ ಹಿನ್ನೆಲೆಯಲ್ಲಿ ಶುಕ್ರವಾರದಂದೂ ಸಹ ಉಳಿದ ದಿನದ ರೀತಿಯಲ್ಲಿ ಕಲಾಪ ನಡೆಸಲು ನಿರ್ಧರಿಸಲಾಗಿದೆ. ನಿಯಮಗಳ ಸಮಿತಿಯಲ್ಲಿ ಸರ್ವಸಮ್ಮತಿಯಿಂದ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದಿದ್ದಾರೆ. (4ನೇ ಪುಟಕ್ಕೆ)

### ರಂಜಾನ್ ಬಿಡುವಿನ ಪ್ರಸ್ತಾಪ ಇಲ್ಲ

ಬೆಂಗಳೂರು, ಫೆ. 21 - ರಂಜಾನ್ ಅವಧಿಯಲ್ಲಿ ಮುಸ್ಲಿಂ ಉದ್ಯೋಗಿಗಳಿಗೆ ಬಿಡುವು ನೀಡುವ ಬಗ್ಗೆ ಪ್ರಸ್ತಾವನೆ ಇಲ್ಲ ಎಂದು ಗೃಹ ಸಚಿವ ಜಿ. ಪರಮೇಶ್ವರ್ ತಿಳಿಸಿದ್ದಾರೆ.

ರಂಜಾನ್ ಅವಧಿಯಲ್ಲಿ ಮುಸ್ಲಿಂ ಉದ್ಯೋಗಿಗಳು ಅವಧಿಗೆ ಮುಂಚೆ ಮನೆಗೆ ತೆರಳಲು ಅವಕಾಶ ನೀಡಬೇಕು ಎಂದು ರಾಜ್ಯ ಕಾಂಗ್ರೆಸ್ ಉಪಾಧ್ಯಕ್ಷ ಸೈಯದ್ ಅಹ್ಮದ್ (4ನೇ ಪುಟಕ್ಕೆ)

**ದೈವಜ್ಞ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ.,**
ಸಿಲ್ವರ್ ಜ್ಯುಬಿಲಿ ಟವರ್, ವಸಂತ ರಸ್ತೆ, ದಾವಣಗೆರೆ ಫೋ : 08192 23754

**ಷೇರುದಾರರ ಗಮನಕ್ಕೆ**

ಸಂಘದ ಮುಂದಿನ ಐದು ವರ್ಷದ ಅವಧಿಗೆ ಆಡಳಿತ ಮಂಡಳಿ ನಿರ್ದೇಶಕರನ್ನು ಆಯ್ಕೆ ಮಾಡಲು ಚುನಾವಣೆಯನ್ನು ದಿನಾಂಕ : 22.02.2025ರ ಶನಿವಾರ ಬೆಳಗ್ಗೆ 9 ರಿಂದ ಸಂಜೆ 4 ಗಂಟೆಯವರೆಗೆ ದೈವಜ್ಞ ಕಲ್ಯಾಣ ಮಂಟಪ ರೇಣುಕಾ ಬಡಾವಣೆ ದಾವಣಗೆರೆ ಇಲ್ಲಿ ನಡೆಸಲಾಗುತ್ತದೆ. ಚುನಾವಣೆಯಲ್ಲಿ ಮತ ನೀಡಲು ಸಂಘವು ನೀಡಿದ ಗುರುತಿನ ಚೀಟಿ ಕಡ್ಡಾಯವಾಗಿರುತ್ತದೆ.

- ಕಾರ್ಯದರ್ಶಿ

**ಹುಟ್ಟುಹಬ್ಬದ ಹಾರ್ದಿಕ ಶುಭಾಷಯಗಳು**

ಮಹಾನಗರ ಪಾಲಿಕೆಯ
ಮಾಜಿ ವಿರೋಧ ಪಕ್ಷದ
ನಾಯಕರು, ಯುವಕರ ಕಣ್ಮಣಿ,
ಅಭಿವೃದ್ಧಿಯ ಹರಿಕಾರ,
ಸರಳ ಸಜ್ಜನಿಕೆಯ ಸಾಕಾರ ಮೂರ್ತಿ

**ಶ್ರೀ ಪ್ರಸನ್ನ ಕುಮಾರ್ ಕೆ.**
ಅವರಿಗೆ

ಹುಟ್ಟುಹಬ್ಬದ ಹಾರ್ದಿಕ
ಶುಭಾಷಯಗಳು

ಭಗವಂತನು ಇವರಿಗೆ
ಆಯುರಾರೋಗ್ಯ-ಐಶ್ವರ್ಯ-ಸುಖ-ಶಾಂತಿ-ನೆಮ್ಮದಿ
ನೀಡಲೆಂದು ಪ್ರಾರ್ಥಿಸುತ್ತಾ,
ಶ್ರೀಯುತರಿಗೆ ಇನ್ನೂ ಉನ್ನತ ಸ್ಥಾನಮಾನಗಳು
ಸಿಗಲಿ ಎಂದು ಆಶೀಸುತ್ತೇವೆ.



**ಶುಭ ಕೋರುವವರು:**
**ಪ್ರಸನ್ನಕುಮಾರ್ ಅಭಿಮಾನಿಗಳ ಬಳಗ**

# ಇ-ಖಾತಾ ಅಭಿಯಾನಕ್ಕೆ ಶಾಸಕ ಹರೀಶ್ ಚಾಲನೆ



**ಹರಿಹರ**

ಹರಿಹರ, ಫೆ.21- ರಾಜ್ಯ ಸರ್ಕಾರ ಇ-ಖಾತಾ ಮಾಡಲು ಮುಂದಾಗಿರುವುದರಿಂದ ಎಲ್ಲರಿಗೂ ಅನುಕೂಲವಾಗಲಿದೆ ಎಂದು ಶಾಸಕ ಬಿ.ಪಿ. ಹರೀಶ್ ಹೇಳಿದರು.

ಇಲ್ಲಿನ ನಗರಸಭೆಯ ಸಭಾಂಗಣದಲ್ಲಿ ಶುಕ್ರವಾರ ಇ-ಖಾತಾ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ನಗರಸಭೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಇ-ಖಾತಾ ಅಭಿಯಾನದ ಯಶಸ್ಸಿಗೆ ಜವಾಬ್ದಾರಿಯಿಂದ ಶ್ರಮಿಸಬೇಕು ಎಂದರು.

ಇ-ಆಸ್ತಿ ನೋಂದಣಿ ಮಾಡಲು ಅಧಿಕಾರಿಗಳು ಹಾಗೂ ಸಿಬ್ಬಂದಿ ವಿಳಂಬ ಧೋರಣೆ ಮಾಡಬಾರದು ಎಂದು ಸೂಚನೆ ನೀಡಿದರು.

ನಗರಸಭೆಯ ಆಡಳಿತ ಹದಗೆಟ್ಟಿದೆ. ಪೌರಾಯುಕ್ತರು ಈ ಬಗ್ಗೆ ಗಮನಹರಿಸಬೇಕು. ನಗರಸಭೆಯ ಸರ್ವ ಸದಸ್ಯರು, ಅಧಿಕಾರಿಗಳು ಹಾಗೂ ಸಿಬ್ಬಂದಿಯನ್ನು ವಿಶ್ವಾಸಕ್ಕೆ ತೆಗೆದುಕೊಂಡು ನಾಗರಿಕರಿಗೆ ಉತ್ತಮ ಸೇವೆ ನೀಡಬೇಕು ಎಂದು ಹೇಳಿದರು.

ತಾಲ್ಲೂಕಿನ ಎಲ್ಲ ಸಮಸ್ಯೆಗಳನ್ನು ಮಾ.3ರಂದು ನಡೆಯುವ ಅಧಿವೇಶನದಲ್ಲಿ ಪ್ರಸ್ತಾಪಿಸಿ, ಜನರ ಹಿತ ಕಾಪಾಡುತ್ತೇನೆ. ನಗರಸಭೆ ವ್ಯಾಪ್ತಿಯಲ್ಲಿ ಬಹಳ ವ್ಯಾಜ್ಯಗಳಿವೆ. ಆದ್ದರಿಂದ ಫೆ.27ರಂದು ಸಭೆ ನಡೆಸಿ, ಸಾರ್ವಜನಿಕರ ಸಮಸ್ಯೆ ಪರಿಹರಿಸಲು ಕ್ರಮಕೈಗೊಳ್ಳಲಾಗುವುದು ಎಂದರು.

ಪೌರಾಯುಕ್ತ ಸುಬ್ರಹ್ಮಣ್ಯ ಶೆಟ್ಟಿ ಮಾತನಾಡಿ, ನಗರಸಭೆ ವ್ಯಾಪ್ತಿಯಲ್ಲಿ ಒಟ್ಟು 41,077 ಆಸ್ತಿಗಳಿದ್ದು, ಅದರಲ್ಲಿ 16,489 ಆಸ್ತಿಗಳು ನೋಂದಣಿಯಾಗಿವೆ. 24,588 ಆಸ್ತಿಗಳು ಇ-ಖಾತಾ ಮಾಡಿಸಲು ಬಾಕಿ ಉಳಿದಿವೆ ಮತ್ತು 6,897 ಅನಧಿಕೃತ ಆಸ್ತಿಗಳಾಗಿವೆ ಎಂದು ಮಾಹಿತಿ ನೀಡಿದರು.

ಈ ವೇಳೆ ನಗರಸಭೆ ಅಧ್ಯಕ್ಷರಾದ ಮಾರುತಿ ಬೇಡರ್, ಉಪಾಧ್ಯಕ್ಷ ಗುತ್ತೂರು ಜಂಬಣ್ಣ, ಸದಸ್ಯರಾದ ಶಂಕರ್ ಖಟಾವ್ಕರ್, ದಾದಾ ಖಲಂದರ್, ಪಿ.ಎನ್ ವಿರೂಪಾಕ್ಷಪ್ಪ, ಆರ್.ಸಿ ಜಾವೇದ್, ಸವಿತಾ ಮರಿದೇವ, ಹನುಮಂತಪ್ಪ, ಬಾಬುಲಾಲ್, ಅಬ್ದುಲ್ ಅಲಿಂ ಇತರರಿದ್ದರು.

## ದೇಶದ ಒಳಿತಿಗಾಗಿ ಪ್ರಧಾನಿ ಬದಲಾಗಲಿ

ದಾವಣಗೆರೆ, ಫೆ.21- ದೇಶದ ಒಳಿತಿಗಾಗಿ ಈಗಿನ ಪ್ರಧಾನಿ ಬದಲಾಗಬೇಕು. ಕೇಂದ್ರ ಸರ್ಕಾರಕ್ಕೆ ಇನ್ನುಳಿದ ನಾಲ್ಕು ವರ್ಷಗಳ ಅಧಿಕಾರವಧಿಯಲ್ಲಿ ಸಚಿವ ನಿತಿನ್ ಗಡ್ಕರಿ ಪ್ರಧಾನಿಯಾದರೆ ಒಳಿತು ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ತಿಳಿಸಿದರು.

ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಭಾಜಪ ದೇಶದಿಂದ ತೊಲಗಬೇಕು ಎಂಬುದು ನನ್ನ ವೈಯಕ್ತಿಕ ಅಭಿಪ್ರಾಯ. ಹಾಗಾಗಿ ಅದು ಅಧಿಕಾರದಲ್ಲೇ ಇರಬಾರದು. ಆದರೆ ದೇಶದ ಜನಾಭಿಪ್ರಾಯ ಬಿಜೆಪಿಗೆ ಸಿಕ್ಕಿದೆ ಎಂದರು.

ದೇಶವನ್ನು ಒಬ್ಬರೇ ನಡೆಸಲು ಸಾಧ್ಯವಿಲ್ಲ. ಕೇಂದ್ರದ ಐವರು ಸಚಿವರ ಹೆಸರು ಜನರಿಗೆ ಗೊತ್ತಿಲ್ಲ. ಮಾಧ್ಯಮಗಳು ಪ್ರಧಾನಿ ನರೇಂದ್ರ ಮೋದಿ ಅವರನ್ನು ಹೀರೋ ಮಾಡಿವೆ. ದೀಪಾವಳಿಯಲ್ಲಿ ಸಿಡಿಸುವ ಪಟಾಕಿ ಕೂಡ ಚೀನಾದಿಂದ ಬರುತ್ತಿದೆ. ಹಾಗಾದರೆ ಮೇಕ್ ಇನ್ ಇಂಡಿಯಾ ಏನಾಯಿತು ? ಎಂದು ಪ್ರಶ್ನಿಸಿದರು.

ಕುಂಭಮೇಳದಲ್ಲಿ ನೀರು ಕಲುಷಿತ ಕಲುಷಿತಗೊಂಡಿರುವುದನ್ನು ವರದಿಗಳು ಖಚಿತಪಡಿಸಿವೆ. ಭಕ್ತರಿಗೆ ಕಲ್ಪಿಸಿದ ವ್ಯವಸ್ಥೆಯಲ್ಲಿ ತಾರತಮ್ಯ ಮಾಡಲಾಗಿದೆ. ಶ್ರೀಮಂತರಿಗಾಗಿ ಲಕ್ಷಾಂತರ ರೂಪಾಯಿಗಳ ಟೆಂಟ್‌ಗಳಿದ್ದರೆ, ಬಡವರು ಪುಣ್ಯ ಸ್ನಾನಕ್ಕೆ ಹಲವು ದಿನ ಕಾಯಬೇಕಿದೆ ದೂರಿದರು.

ಮುಡಾ ಪ್ರಕರಣದಲ್ಲಿ ಸಿಎಂ ಸಿದ್ದರಾಮಯ್ಯನವರಿಗೆ ಕ್ಲೀನ್‌ಚಿಟ್ ಸಿಕ್ಕಿದೆ. ಇದು ನ್ಯಾಯಕ್ಕೆ ಸಂದ ಜಯ. ದೇಶದ ಏಕೈಕ ಹಿಂದುಳಿದ ಸಮುದಾಯದ ಮುಖ್ಯಮಂತ್ರಿಯಾಗಿರುವ ಸಿದ್ದರಾಮಯ್ಯ ಅವರಿಗೆ ತೊಂದರೆ ನೀಡಬೇಕು ಎಂಬ ಬಿಜೆಪಿ ಹುನ್ನಾರ ವಿಫಲವಾಯಿತು ಎಂದರು.

# ಶರಣ ವಚನಗಳು ಇಂದಿಗೂ ಪ್ರಸ್ತುತ



**ಹರಪನಹಳ್ಳಿ : ಶರಣ ಸಾಹಿತ್ಯ ಪರಿಷತ್ ಕಾರ್ಯಕ್ರಮದಲ್ಲಿ ನಿವೃತ್ತ ಮುಖ್ಯ ಶಿಕ್ಷಕ ಹನುಮಂತಪ್ಪ**

ಹರಪನಹಳ್ಳಿ, ಫೆ.21- ಜಗತ್ತು ಜಾಗತಿಕವಾಗಿ ಎಷ್ಟೇ ಮುಂದುವರೆದಿದ್ದರೂ, ಶರಣ ವಚನಗಳು ಇಂದಿಗೂ ಪ್ರಸ್ತುತವಿದ್ದು, ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ನಿವೃತ್ತ ಮುಖ್ಯ ಶಿಕ್ಷಕ ಹನುಮಂತಪ್ಪ ಹೇಳಿದರು.

ತಾಲ್ಲೂಕಿನ ಬೆಣ್ಣೆಹಳ್ಳಿ ಗ್ರಾಮದ ಕರೇಗೌಡ್ರು ಬಸವನಗೌಡ ಗೋಣೆಮ್ಮ ಪ್ರೌಢಶಾಲೆಯಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ವತಿಯಿಂದ ಹಾಲಮ್ಮ ಸಿದ್ದಪ್ಪ ದತ್ತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡುತ್ತಿದ್ದರು.

ಅತ್ಯಂತ ಸರಳ ಭಾಷೆಯಲ್ಲಿ ಜೀವನದ ಮೌಲ್ಯಗಳನ್ನು ತಿಳಿಸುವ ವಚನಗಳು ವಿದ್ಯಾರ್ಥಿಗಳ ಬಾಳಿನಲ್ಲಿ ಅನುಸರಿಸುವುದರಿಂದ ಸುಂದರ ಬದುಕು ಕಟ್ಟಿಕೊಳ್ಳಬಹುದು. ವಚನಗಳು ಜಾತಿ, ಮತ, ಪಂಥ ಮೀರಿದವುಗಳು. ಅವುಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕಾದ ಅಗತ್ಯವಿದೆ ಎಂದರು.

ಶರಣ ಸಾಹಿತ್ಯ ಪರಿಷತ್ತು ತಾಲ್ಲೂಕು ಅಧ್ಯಕ್ಷ ಷಣ್ಮುಖಪ್ಪ ಮಾತನಾಡಿ, ಶರಣರು ನುಡಿದಂತೆ ತಮ್ಮ ಜೀವನದಲ್ಲಿಯೂ ಅಳವಡಿಸಿಕೊಂಡು ನಡೆದರು. ದೇಶ-ವಿದೇಶಗಳ ಪ್ರಸಿದ್ಧ ರಾಜರುಗಳೂ ಕೂಡ ಬಸವಣ್ಣನವರ ವಚನಗಳ ಪ್ರಭಾವಕ್ಕೆ ಒಳಗಾಗಿ ಸಾಮಾನ್ಯರಂತೆ ಜೀವಿಸಿ, ಕಾಯಕ ಅನುಸರಿಸಿ, ದಾಸೋಹ ಮಾಡಿದ ಸಾಕಷ್ಟು ಉದಾಹರಣೆಗಳಿವೆ ಎಂದರು.

ಬಸವಣ್ಣನವರು ಕಾಯಕವೇ ಕೈಲಾಸ ಸಿದ್ಧಾಂತವನ್ನು ತಮ್ಮ ಜೀವನದಲ್ಲಿ ಸಂಪೂರ್ಣವಾಗಿ ಅಳವಡಿಸಿಕೊಂಡಿದ್ದರು. 8 ಶತಮಾನಗಳು ಗತಿಸಿದರೂ ಇಂದಿಗೂ ಅವರ ತತ್ವ, ಸಿದ್ಧಾಂತಗಳು ಸಮಾಜದ ಮುಖ್ಯ ನೆಲೆಯಲ್ಲಿರುವುದೇ ಸಾಕ್ಷಿ ಎಂದರು.

ಕಾರ್ಯಕ್ರಮದಲ್ಲಿ ಬಿ. ಕುಬೇರಪ್ಪ, ಮುಖ್ಯ ಶಿಕ್ಷಕ ಶಂಕರಮೂರ್ತಿ, ದಾನ ಚಿಂತಾಮಣಿ ಹೆಚ್.ಎಂ. ಲಲಿತಮ್ಮ, ಎಸ್. ವೀರಭದ್ರಪ್ಪ, ಎ. ರುದ್ರಪ್ಪ, ರೇಣುಕಾ ಸಕ್ರಿ, ಚಂದ್ರು ಬಡಿಗೇರ್, ಮೋಹನ್, ಶಬಿನಾಬಿ, ಬಿ. ರಾಜಶೇಖರ್ ಮತ್ತಿತರರು ಉಪಸ್ಥಿತರಿದ್ದರು.

## ರಾಣೇಬೆನ್ನೂರು : ಖಾತೆಗೆ ಬೆಳೆ ವಿಮೆ ಹಣ ಜಮೆ ಆಗದಿದ್ದರೆ ಹೋರಾಟ



ರಾಣೇಬೆನ್ನೂರು, ಫೆ.21- ತಾಲ್ಲೂಕಿನ ರೈತರಿಗೆ ಜಮೆ ಆಗಬೇಕಿದ್ದ ಸುಮಾರು 50 ಕೋಟಿಯಷ್ಟು ಬೆಳೆ ವಿಮೆ ಹಣ ಬಾಕಿ ಇದ್ದು, ತಿಂಗಳೊಳಗಾಗಿ ರೈತರ ಖಾತೆಗೆ ಹಣ ಜಮೆ ಮಾಡದಿದ್ದಲ್ಲಿ ಉಗ್ರ ಹೋರಾಟ ಕೈಗೊಳ್ಳಲಿದ್ದೇವೆ ಎಂದು ಜಿ.ಪಂ ಮಾಜಿ ಸದಸ್ಯ, ಬಿಜೆಪಿ ಮುಖಂಡ ಸಂತೋಷ್ ಪಾಟೀಲ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ತಮ್ಮ ಅಧಿಕಾರದ ಅವಧಿಯಲ್ಲಿ 2023-24 ಸಾಲಿನ 29,117 ಫಲಾನುಭವಿಗಳ ಖಾತೆಗೆ ತಲಾ ಶೇ.25 ರಂತೆ 16.87 ಲಕ್ಷದಷ್ಟು ಹಣ ಜಮಾ ಮಾಡಿದ್ದರು ಎಂದರು.

ಹಾವೇರಿ ಜಿಲ್ಲಾಧಿಕಾರಿಗಳ ಬಳಿ ಇರುವ ಬಾಕಿ 50 ಕೋಟಿ ಹಣವನ್ನು ರೈತರಿಗೆ ಕೊಡುವಲ್ಲಿ ನಮ್ಮ ಶಾಸಕ ಪ್ರಕಾಶ ಕೋಳಿವಾಡರಾಗಲೀ, ಜಿಲ್ಲಾ ಉಸ್ತುವಾರಿ ಸಚಿವ ಶಿವಾನಂದ ಪಾಟೀಲ್ ಅವರಾಗಲೀ ಕ್ರಮ ಜರುಗಿಸದಿರುವುದು ಖಂಡನೀಯ ಎಂದರು.

2 ವರ್ಷಗಳಿಂದ ಜಿಲ್ಲೆ ಹಾಗೂ ತಾಲ್ಲೂಕಿನ ಕೆಡಿಪಿ ಸಭೆಗಳಲ್ಲಿ ಈ ಕುರಿತು ಚಕಾರ ಎತ್ತದಿರುವ ನಮ್ಮ ಪ್ರತಿನಿಧಿಗಳ ವರ್ತನೆ ಈ ಸರ್ಕಾರದ ವೈಫಲ್ಯ. ಪ್ರಕೃತಿ ವಿಕೋಪ ಹಾಗೂ ಹಲವು ಕಾರಣಗಳಿಂದ ತೀವ್ರ ಸಂಕಷ್ಟಕ್ಕೆ ಸಿಲುಕುವ ರೈತ ಸಮುದಾಯವನ್ನು ಅಲಕ್ಷಿಸುತ್ತಿರುವುದು ವಿಷಾದಕರ ಸಂಗತಿ. ಈ ಬಗ್ಗೆ ರೈತರು ಸಿಡಿದೇಳುವ ಮೊದಲೇ ಪ್ರತಿನಿಧಿಗಳು ಎಚ್ಚೆತ್ತುಕೊಳ್ಳಬೇಕಿದೆ ಎಂದು ಹೇಳಿದರು. ಯಾವುದೇ ರಾಜಕೀಯ ಪಕ್ಷಗಳಾಗಲೀ ಭಿನ್ನಾಭಿಪ್ರಾಯ ಇರುವುದು ಸಹಜ. ಆದರೆ ಅವುಗಳು ಅತೀ ಆದಾಗ ಪಕ್ಷದ ಕಾರ್ಯಕರ್ತರ ಮೇಲೆ ಪ್ರಭಾವ ಬೀರಿ, ಪಕ್ಷ ಸಂಘಟನೆ ಕುಂಟಿತಗೊಳ್ಳುತ್ತದೆ. ಪಕ್ಷದ ಹಿರಿಯರು ಈ ಬಗ್ಗೆ ಚಿಂತನೆ ನಡೆಸಿ ಯೋಗ್ಯ ಕ್ರಮ ಕೈಗೊಳ್ಳುವರು ಎಂದು ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದರು.

## ಅಪ್ರಾಪ್ತ ಬೈಕ್ ಚಾಲನೆ : 25 ಸಾವಿರ ದಂಡ

ಚನ್ನಗಿರಿ, ಫೆ.21- ಅಪ್ರಾಪ್ತ ಬೈಕ್ ಚಲಾಯಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ವಾಹನದ ಮಾಲೀಕರಿಗೆ ಇಲ್ಲಿನ ಪಿಸಿಜೆ ಮತ್ತು ಜೆಎಂಎಫ್‌ಸಿ ನ್ಯಾಯಾಲಯವು 25 ಸಾವಿರ ರೂ. ದಂಡ ವಿಧಿಸಿದೆ.

ಫೆ.19ರಂದು ಚನ್ನಗಿರಿ ಠಾಣೆಯ ಎಎಸ್‌ಐ ಉಸ್ಮಾನ್ ಮತ್ತು ಸಿಬ್ಬಂದಿ ನಡೆಸಿದ ವಿಶೇಷ ಕಾರ್ಯಾಚರಣೆಯಲ್ಲಿ ಬೈಕ್ ಸವಾರನೊಬ್ಬ ಅಪ್ರಾಪ್ತ ವಯಸ್ಸಿನವ ಎಂದು ತಿಳಿದು ಬಂದಿದೆ. ಅಜ್ಜಿಹಳ್ಳಿ ಗ್ರಾಮದ ಉಮೇಶ್ ಎಂಬುವವರಿಗೆ ಸೇರಿದ ಹೀರೊ ಹೊಂಡಾ ಬೈಕ್ ವಶ ಪಡಿಸಿಕೊಳ್ಳಲಾಗಿದ್ದು, ಚನ್ನಗಿರಿ ಸಂಚಾರ ಠಾಣೆಯಲ್ಲಿ ಬೈಕ್ ಮಾಲೀಕನ ವಿರುದ್ಧ ಪ್ರಕರಣ ದಾಖಲಿಸಿ, ನ್ಯಾಯಾಲಯಕ್ಕೆ ದೋಷಾರೋಪಣೆ ಸಲ್ಲಿಸಲಾಗಿತ್ತು.

ಪ್ರಕರಣ ಕುರಿತು ನ್ಯಾಯಾಧೀಶರು ಅಪ್ರಾಪ್ತರಿಗೆ ವಾಹನ ನೀಡದಂತೆ ಎಚ್ಚರಿಕೆ ನೀಡುವ ಜತೆಗೆ ದಂಡ ವಿಧಿಸಿ ಆದೇಶಿಸಿದ್ದಾರೆ.

## ಸಾಂಭಾಜಿ ಮಹಾರಾಜ್ ಬಗ್ಗೆ ಆಕ್ಷೇಪಾರ್ಹ ಅಂಶ

### ವಿಕಿಪೀಡಿಯಾದ ನಾಲ್ವರು ಸಂಪಾದಕರ ವಿರುದ್ಧ ಪ್ರಕರಣ

ಮುಂಬೈ, ಫೆ. 21 - ಛತ್ರಪತಿ ಸಾಂಭಾಜಿ ಮಹಾರಾಜ್ ಅವರ ಬಗ್ಗೆ ಆಕ್ಷೇಪಾರ್ಹ ಅಂಶಗಳನ್ನು ತೆಗೆದುಹಾಕದ ಹಿನ್ನೆಲೆಯಲ್ಲಿ ವಿಕಿಪೀಡಿಯಾದ ಕನಿಷ್ಠ ನಾಲ್ವರು ಸಂಪಾದಕರ ವಿರುದ್ಧ ಮಹಾರಾಷ್ಟ್ರ ಸೈಬರ್ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಓಪನ್ ಸೋರ್ಸ್ ವಿಶ್ವಕೋಶ ಆಗಿರುವ ವಿಕಿಪೀಡಿಯ ನಿರ್ವಹಿಸಿರುವ ಕ್ಯಾಲಿಫೋರ್ನಿ ಯಾದ ವಿಕಿಪೀಡಿಯ ಫೌಂಡೇಶನ್‌ಗೆ ನೋಟಿಸ್ ಕಳಿಸಲಾಗಿದೆ.

ವಿಕಿಪೀಡಿಯಾದಲ್ಲಿ ದಾಖಲಿಸಿರುವ ಅಂಶ ತಪ್ಪಾಗಿದೆ. ಇದರಿಂದ ರಾಜ್ಯದಲ್ಲಿ ಕಾನೂನು ಸಮಸ್ಯೆ ಉಂಟಾಗಬಹುದು.

ಛತ್ರಪತಿ ಶಿವಾಜಿ ಮಹಾರಾಜ್ ಅವರ ಪುತ್ರ ಸಾಂಭಾಜಿ ಮಹಾರಾಜ್ ಭಾರತದಲ್ಲಿ ಗೌರವಾನ್ವಿತರಾಗಿದ್ದಾರೆ ಎಂದು ನೋಟಿಸ್‌ನಲ್ಲಿ ತಿಳಿಸಲಾಗಿದೆ.

ಆಕ್ಷೇಪಿಸಲಾಗಿರುವ ಅಂಶವನ್ನು ತೆಗೆದುಹಾಕುವ ಬಗ್ಗೆ ವಿಕಿಪೀಡಿಯ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಮಹಾರಾಷ್ಟ್ರದ ಸೈಬರ್ ಪೋಲೀಸರು ಮಾಹಿತಿ ತಂತ್ರಜ್ಞಾನ ಕಾಯ್ದೆಯಡಿ ವಿಕಿಪೀಡಿಯಾದ ನಾಲ್ವರು ಸಂಪಾದಕರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ವಿಕಿಪೀಡಿಯ ಮುಕ್ತ ಮಾಹಿತಿ ಹೊಂದಿರುವ ವಿಶ್ವಕೋಶವಾಗಿದೆ.

ಇದನ್ನು ಆಯ್ದ ಸಮುದಾಯದ ಕಾರ್ಯಕರ್ತರು ನಿರ್ವಹಿಸುತ್ತಾರೆ. ಕೆಲ ನಿರ್ದಿಷ್ಟ ವ್ಯಕ್ತಿಗಳು ಇದರಲ್ಲಿ ಮಾಹಿತಿ ದಾಖಲಿಸಬಹುದು ಎಂದು ಪೊಲೀಸರು ಹೇಳಿದ್ದಾರೆ.

## ನಗರದಲ್ಲಿ ಇಂದು ಸಾಂಸ್ಕೃತಿಕ ಸ್ಪರ್ಧೆ

ವನಿತಾ ಸಮಾಜದ ವತಿಯಿಂದ ಪಿ.ಜೆ. ಬಡಾವಣೆಯ ವನಿತಾ ಸಮಾಜದಲ್ಲಿ ಇಂದು ವಿವಿಧ ಸಾಂಸ್ಕೃತಿಕ ಸ್ಪರ್ಧೆ ನಡೆಯಲಿವೆ.

ಇಂದು ಮಧ್ಯಾಹ್ನ 2.30ಕ್ಕೆ ರಸ ಪ್ರಶ್ನೆ ಸ್ಪರ್ಧೆ ನಡೆಯಲಿದೆ. 25 ವರ್ಷ ಮೇಲ್ಪಟ್ಟ ಮಹಿಳೆಯರಿಗೆ ಮಾತ್ರ ಸ್ಪರ್ಧೆಯಲ್ಲಿ ಭಾಗವಹಿಸಲು ಅವಕಾಶ ಇರುತ್ತದೆ ಎಂದು ಪದ್ಮ ಪ್ರಕಾಶ್ ತಿಳಿಸಿದ್ದಾರೆ. ವಿವರಕ್ಕೆ ಸಂಪರ್ಕಿಸಿ : 9449811407.

## ಬೆಳ್ಳೂಡಿ : ಇಂದು ಎಸ್ಸೆಸ್ಸೆಲ್ಸಿ ಫಲಿತಾಂಶ ಪುನಶ್ಚೇತನ ಶಿಬಿರ

ದಾವಣಗೆರೆ, ಫೆ.21- ಹರಿಹರ ತಾಲ್ಲೂಕಿನ ಬೆಳ್ಳೂಡಿಯ ಚಂದ್ರಗುಪ್ತ ಮೌರ್ಯ ಪಬ್ಲಿಕ್ ಸ್ಕೂಲ್‌ನಲ್ಲಿ ನಾಳೆ ದಿನಾಂಕ 22ರ ಶನಿವಾರ ಬೆಳಿಗ್ಗೆ 10ರಿಂದ ಸಂಜೆ 5ರ ವರೆಗೆ ಜಿಲ್ಲೆಯ ಸರ್ಕಾರಿ ಮತ್ತು ಅನುದಾನಿತ ಪ್ರೌಢಶಾಲೆ ವಿದ್ಯಾರ್ಥಿಗಳಿಗಾಗಿ ಎಸ್ಸೆಸ್ಸೆಲ್ಸಿ ಫಲಿತಾಂಶ ಪುನಶ್ಚೇತನ ಶಿಬಿರವನ್ನು ಏರ್ಪಡಿಸಲಾಗಿದೆ ಎಂದು ಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠ ಶಿಕ್ಷಣ ಸಮಿತಿಯ ಟ್ರಸ್ಟಿ ಮಾಗೋದಿ ಮಂಜುನಾಥ್ ತಿಳಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶ್ರೀ ಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠ ಶಿಕ್ಷಣ ಸಮಿತಿ, ಚಂದ್ರಗುಪ್ತ ಮೌರ್ಯ ವಿದ್ಯಾ ಸಂಸ್ಥೆಗಳ ಸಂಯುಕ್ತಾಶ್ರಯ ಮತ್ತು ಹರಿಹರದ ಕಾಂಗ್ರೆಸ್ ಮುಖಂಡ ಶ್ರೀನಿವಾಸ್ ನಂದಿಗಾವಿ ಪ್ರಾಯೋಜಕತ್ವದಲ್ಲಿ ಶಿಬಿರ ನಡೆಯಲಿದೆ ಎಂದು ಹೇಳಿದರು.

ಸಂಪನ್ಮೂಲ ವ್ಯಕ್ತಿಗಳಾದ ಬೆಂಗಳೂರಿನ ಸಾರ್ವಜನಿಕ ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕ ಎಸ್.ಕೆ.ಬಿ ಪ್ರಸಾದ್, ಸ್ಪರ್ಧಾತ್ಮ ಪರೀಕ್ಷೆಗಳ ತಜ್ಞ ಎಂ. ಶಿವಕುಮಾರ್, ಕೌಶಲ್ಯ ಅಭಿವೃದ್ಧಿ ತರಬೇತುದಾರರಾದ ರೇಣುಕಾ ಅಶೋಕ್, ಶಿಕ್ಷಣ ತಜ್ಞರಾದ ನಿಂಗಪ್ಪ ಉಪ್ಪಾಳ್, ರಾಯ್ ಎಲ್. ಅರಸಿದ್ದಿ, ಬಿ.ಸಿ. ತುಂಬಗಿ, ಶಶಿಕುಮಾರ್, ಕೆ.ವಿ. ವೆಂಕಟೇಶ್ ಬಾಬು ಶಿಬಿರದಲ್ಲಿ ಭಾಗವಹಿಸಲಿದ್ದಾರೆ.

ಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠ ಶಿಕ್ಷಣ ಸಮಿತಿಯ ಟ್ರಸ್ಟಿ ನಂದಿಗಾವಿ ಶ್ರೀನಿವಾಸ್ ಮಾತನಾಡಿ, ಜಿಲ್ಲೆಯಲ್ಲಿ ಮೊಟ್ಟ ಮೊದಲ ಬಾರಿಗೆ ಉಪಯುಕ್ತ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಶಾಲೆಯ ಕಾರ್ಯದರ್ಶಿ ಎಸ್. ನಿಂಗಪ್ಪ, ಶೈಕ್ಷಣಿಕ ನಿರ್ದೇಶಕರಾದ ಶೃತಿ ಇನಾಮ್ದಾರ್ ಇದ್ದರು.

## ನ್ಯಾಯಾಲಯದಲ್ಲಿ ಆಯುಷ್ ಆರೋಗ್ಯ ತಪಾಸಣೆ ಇಂದು

ಆಯುಷ್ ಆರೋಗ್ಯ ತಪಾಸಣೆ ಮತ್ತು ಔಷಧಿ ವಿತರಣಾ ಶಿಬಿರ ಇಂದು ಬೆಳಿಗ್ಗೆ 10.30ಕ್ಕೆ ವಕೀಲರ ಸಾಂಸ್ಕೃತಿಕ ಸಮುದಾಯ ಭವನದಲ್ಲಿ ನಡೆಯಲಿದೆ.

ಶಿಬಿರದ ಉದ್ಘಾಟನೆಯನ್ನು ಜಿಲ್ಲಾ ನ್ಯಾಯಾಧೀಶರಾದ ರಾಜೇಶ್ವರಿ ಎನ್.ಹೆಗಡೆ ನೆರವೇರಿಸುವರು. ನ್ಯಾಯಾಧೀಶರುಗಳಾದ ಮಂಜಪ್ಪ ಹನುಮಂತಪ್ಪ ಅಣ್ಣಯ್ಯ, ಆರ್. ಎನ್.ಪ್ರವೀಣ್‌ಕುಮಾರ್, ಶ್ರೀರಾಮ ನಾರಾಯಣ ಹೆಗಡೆ, ಶಿವಪ್ಪ ಗಂಗಪ್ಪ ಸಲಗರೆ, ಟಿ. ಎಂ.ನಿವೇದತಾ, ಮಹಾವೀರ ಮ. ಕರೆಣ್ಣವರ, ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್.ಅರುಣ್‌ಕುಮಾರ್ ಉಪಸ್ಥಿತರಿರುವರು.

## ಮಾಂಟೆಸೊರಿಯಲ್ಲಿ ವಸ್ತು ಪ್ರದರ್ಶನ

ಮಾಂಟಿಸೊರಿ ಕಾನ್ವೆಂಟ್ ಶಾಲೆಯಲ್ಲಿ ಕಲೆ ಮತ್ತು ವಿಜ್ಞಾನದ ವಸ್ತು ಪ್ರದರ್ಶನವನ್ನು ಇಂದು ಬೆಳಿಗ್ಗೆ 10ಕ್ಕೆ ಶಾಲೆಯ ಆವರಣದಲ್ಲಿ ಏರ್ಪಡಿಸಲಾಗಿದೆ.

ರಾಜ್ಯ ವಿಜ್ಞಾನ ಪರಿಷತ್ ನ ಕಾರ್ಯದರ್ಶಿ ಗುರುಸಿದ್ದ ಸ್ವಾಮಿ, ಸಂಪನ್ಮೂಲ ವ್ಯಕ್ತಿಗಳಾಗಿ ನಾಗರಾಜ್ ಅತಿಥಿಗಳಾಗಿ ಆಗಮಿಸುವರು. ವಿಶೇಷ ಅತಿಥಿಗಳಾಗಿ ಡಾ. ಶಶಿಕಲಾ, ಶ್ರೀಮತಿ ಶಿಲ್ಪ, ಶ್ರೀಮತಿ ಲತಾ ಭಾಗವಹಿಸುವರು. ಅಧ್ಯಕ್ಷತೆಯನ್ನು ಶಾಲೆಯ ಆಡಳಿತಾಧಿಕಾರಿ ಶ್ರೀಮತಿ ಎಸ್. ಎಂ. ಮಲ್ಲಮ್ಮ ವಹಿಸುವರು.

# ಕೊಮಾರನಹಳ್ಳಿಯಲ್ಲಿ ಅಕ್ರಮ ಮದ್ಯ ಮಾರಾಟ ಬಂದ್‌ಗೆ ಮನವಿ

ಮಲೇಬೆನ್ನೂರು, ಫೆ. 21- ಕೊಮಾರನಹಳ್ಳಿ ಗ್ರಾಮದಲ್ಲಿ ಅಕ್ರಮವಾಗಿ ನಡೆಸುತ್ತಿರುವ ಮದ್ಯದಂಗಡಿ ತೆರವುಗೊಳಿಸುವಂತೆ ಒತ್ತಾಯಿಸಿ, ಸದ್ಗುರು ಸಂತ ಶ್ರೀ ಸೇವಾಲಾಲ್ ಯುವಕರ ಸಂಘದ ಸದಸ್ಯರು ಗುರುವಾರ ಮಲೇಬೆನ್ನೂರು ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಗ್ರಾಮದ ಬಂಜಾರ ತಾಂಡಾದಲ್ಲಿ ಅಕ್ರಮ ಮದ್ಯದಂಗಡಿಗಳ ಹಾವಳಿ ಹೆಚ್ಚಾಗಿದೆ. ರಾಜಾರೋಷವಾಗಿ ಬೀದಿಗಳಲ್ಲಿ ಅಕ್ರಮ ಮದ್ಯ ಮಾರಾಟ ಮಾಡುತ್ತಿದ್ದಾರೆ. ತಾಂಡಾದ ಪುರುಷರು, ಮಹಿಳೆಯರು ಮದ್ಯಪಾನ ಮಾಡಿ, ಮನೆಯಲ್ಲಿ ಗಲಾಟೆ ಮಾಡುತ್ತಿದ್ದಾರೆ. ಈ ಕಾರಣದಿಂದ ಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ.

ಮದ್ಯಪಾನದಿಂದ ತಾಂಡಾದ ಕುಟುಂಬಗಳು ತೊಂದರೆ ಅನುಭವಿಸುತ್ತಿವೆ. ಆದ್ದರಿಂದ ಅಕ್ರಮ ಮದ್ಯ ಮಾರಾಟ ಮಾಡುವ ಅಂಗಡಿಗಳನ್ನು ತೆರವುಗೊಳಿಸಬೇಕೆಂದು ಒತ್ತಾಯಿಸಿ ಪಿಎಸ್‌ಐ ಪ್ರಭು ಕೆಳಗಿನಮನಿಯವರಿಗೆ ಸಂಘದ ಅಣ್ಣಾನಾಯ್ಕ, ಗೌರವ ಅಧ್ಯಕ್ಷ ಪರಮೇಶ್ ನಾಯ್ಕ, ಸದಸ್ಯರಾದ ರಂಗಾನಾಯ್ಕ, ಕುಮಾರನಾಯ್ಕ, ರಾಮಾನಾಯ್ಕ, ಎನ್. ನಾಗರಾಜ್ ಮತ್ತಿತರರು ದೂರು ನೀಡಿದ್ದಾರೆ.



> ಕೊಮಾರನಹಳ್ಳಿಯ ನಮ್ಮ ತಾಂಡಾದಲ್ಲಿ 15 ವರ್ಷ ದೊಳಗಿನ ಮಕ್ಕಳೂ ಕುಡಿಯುವುದನ್ನು ಕಲಿತಿದಿದ್ದಾರೆ. ಬಹುತೇಕ ಮಕ್ಕಳು 10ನೇ ತರಗತಿ ಒಳಗೆ ಶಾಲೆ ಬಿಟ್ಟು ಹೋಟೆಲ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ. ಸಂಪಾದಿಸಿದ ಹಣದಲ್ಲಿ ಕುಡಿಯುವುದನ್ನು ಕಲಿತಿದ್ದಾರೆ. ಮಕ್ಕಳ ಭವಿಷ್ಯ ಹಾಳಾಗುತ್ತಿದೆ.
>
> **- ಅಣ್ಣಾನಾಯ್ಕ,** ಅಧ್ಯಕ್ಷ ಸಂತ ಶ್ರೀ ಸೇವಾಲಾಲ್ ಯುವಕರ ಸಂಘ, ಕೊಮಾರನಹಳ್ಳಿ.


## ಮನೆ ಅಡುಗೆಯವರು ಬೇಕಾಗಿದ್ದಾರೆ

ಸಸ್ಯಾಹಾರ ಹಾಗೂ ಮಾಂಸಾಹಾರದ ಅಡುಗೆ ಮಾಡಲು ಮಹಿಳಾ ಅಡುಗೆಯವರು ಬೇಕಾಗಿದ್ದಾರೆ.

ಸ್ಥಳ : ದಾವಣಗೆರೆ

96865 51303



## ಹೆಬ್ಬಾಳು ಗ್ರಾಮದ ಅಂಗಡಿ ರುದ್ರಮ್ಮ ನಿಧನ



ದಾವಣಗೆರೆ ತಾಲ್ಲೂಕು
ಹೆಬ್ಬಾಳು ಗ್ರಾಮದ ವಾಸಿ
ದಿ. ಅಂಗಡಿ ಕಲ್ಲಿಂಗಪ್ಪನವರ ಧರ್ಮಪತ್ನಿ
**ಶ್ರೀಮತಿ ರುದ್ರಮ್ಮ** (89 ವರ್ಷ)
ಇವರು ದಿನಾಂಕ 21.02.2025 ರ ಶುಕ್ರವಾರ ಬೆಳಿಗ್ಗೆ 9.30ಕ್ಕೆ ನಿಧನರಾದರು. ಸರ್ಕಾರಿ ಶುಶ್ರೂಷಕಾಧಿಕಾರಿಗಳ ಸಂಘದ ದಾವಣಗೆರೆ ಜಿಲ್ಲಾ ಘಟಕದ ಅಧ್ಯಕ್ಷ ಹೆಚ್.ಕೆ.ಕಲ್ಲೇಶ್ ಸೇರಿದಂತೆ ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಅಳಿಯಂದಿರು ಸೊಸೆಯಂದಿರು ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು- ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 22.02.2025 ರ ಶನಿವಾರ ಮಧ್ಯಾಹ್ನ 12 ಗಂಟೆಗೆ ಹೆಬ್ಬಾಳು ಗ್ರಾಮದ ಮೃತರ ಸ್ವಂತ ಜಮೀನಿನಲ್ಲಿ ನೆರವೇರಲಿದೆ.

**ದುಃಖ ತಪ್ತ ಕುಟುಂಬ ವರ್ಗದವರು**

## ಹನ್ನೆರಡನೇ ವರ್ಷದ ಪುಣ್ಯಸ್ಮರಣೆ



ನಮ್ಮ ಕುಟುಂಬದ
"ಬಂಗಾರದ ಮನುಷ್ಯನಿಗೆ"
ನಮನಗಳು.
ಇಲಾಖಾದಾರ ಮಠದ
**ಶ್ರೀ ಎಂ.ವಿ. ಕಲ್ಯಾಣಯ್ಯನವರು**
(ನಿವೃತ್ತ ಶಿಕ್ಷಕರು)

ಸದಾ ನಿಮ್ಮ ನೆನಪಿನಲ್ಲಿರುವ,
ನೀವು ಹಾಕಿಕೊಟ್ಟಿರುವ ಮಾರ್ಗದಲ್ಲಿಯೇ ಸಾಗುತ್ತಿರುವ
ನಿಮ್ಮ ಸಮಸ್ತ ಕುಟುಂಬ ವರ್ಗ.
ನಿಮ್ಮ ಆಶೀರ್ವಾದ ನಮ್ಮೆಲ್ಲರ ಮೇಲೆ ಸದಾ ಇರಲಿ.

ಶ್ರೀಮತಿ ಕೆ.ಎಂ. ಚಂದ್ರಮತಿ
ಶ್ರೀ ಎಂ.ವಿ. ಚಂದ್ರಶೇಖರಯ್ಯ ಮತ್ತು
ಕುಟುಂಬ ವರ್ಗ, ದಾವಣಗೆರೆ

## ಪತ್ರ ಕಳೆದಿದೆ

'ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ದೊಡ್ಡಬೂದಿಹಾಳು (ಗ್ರಾಮದ ರಿ ಸರ್ವೆ ನಂಬರ್ 92/3 ಇದರ ವಿಸ್ತೀರ್ಣ: ಎಕರೆ ಇಲ್ಲಾ, ಗುಂಟೆ-ಮೂವತ್ಮೂರು (0-33) ಆಕಾರ ರೂ.1-15ಪೈಸೆವುಳ್ಳ ಜಮೀನನ್ನು ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲ್ಲೂಕು, ಗಜಾಪುರ ಅಂಚೆ, ಬತ್ತನ ಹಳ್ಳಿ ಗ್ರಾಮದಲ್ಲಿ ವಾಸವಾಗಿರುವ ಶ್ರೀ ಎಸ್.ಎ.ಹನುಮಂತಪ್ಪ ಬಿನ್ ಲೇಟ್ ಅಂಜಿನಪ್ಪ, ಆದ ನಾನು ಸದರಿ ದೊಡ್ಡಬೂದಿಹಾಳು ಗ್ರಾಮದ ವಾಸಿಯಾದ ಶ್ರೀ ಬಸಪ್ಪ ಬಿನ್ ದುರುಗಪ್ಪ ಮತ್ತು ಇವರ ಧರ್ಮಪತ್ನಿ, ಮಕ್ಕಳುಗಳಿಂದ ಕ್ರಯಕ್ಕೆ ಪಡೆದುಕೊಂಡು, ಈ ಬಗ್ಗೆ ಈ ಹಿಂದೆ ದಿನಾಂಕ:27-08-2011 ರಂದು ದಾವಣಗೆರೆ ಸಬ್ ರಿಜಿಸ್ಟ್ರಾರವರ ಆಫೀಸಿನ 1ನೇ ಪುಸ್ತಕದ, ಸಿ.ಡಿ. ನಂ.ಡಿವಿಜಿಡಿ-253 ರಲ್ಲಿ, ದಸ್ತಾವೇಜು ಸಂಖ್ಯೆ: 06012/2011-12ನೇ ನಂಬರಾಗಿ ಶುದ್ಧ ಕ್ರಯಪತ್ರವನ್ನು ಸಹ ಪಡೆದುಕೊಂಡಿದ್ದು, ಮೂಲ ಓರಿಜಿನಲ್ ದಾಖಲಾತಿಯನ್ನು ಸಹ ಪಡೆದುಕೊಂಡಿದ್ದು, ಸರಿಯಷ್ಟೆ. ಆದರೆ ಸದರಿ ಜಮೀನಿನ ಮೂಲ ಕ್ರಯ ಪತ್ರವು ಕಳೆದು ಹೋಗಿದ್ದು, ಕ್ರಯ ಪತ್ರವು ಕಳೆದು ಹೋಗಿರುವ ಬಗ್ಗೆ ದಿನಾಂಕ: 14-02-2025 ರಂದು ಬಡಾವಣೆ ಪೊಲೀಸ್ ಠಾಣೆ, ದಾವಣಗೆರೆ ಇವರಲ್ಲಿ ದೂರನ್ನು ಸಲ್ಲಿಸಿದ್ದು, ರಸೀದಿ ಸಂಖ್ಯೆ : 1478348/2025 ರಂತೆ ಸಹ ಪಡೆದುಕೊಂಡಿರುತ್ತೇನೆ. ಇದರೊಂದಿಗೆ ಲಗತ್ತಿಸಿರುತ್ತೇನೆ. ಒಂದು ವೇಳೆ ಈ ಕ್ರಯಪತ್ರವು ಸಿಕ್ಕಲ್ಲಿ ನನ್ನ ದೂರವಾಣಿ ಸಂಖ್ಯೆಯಾದ : 990215 4999, 99456 56565 ಕ್ಕೆ ಸಂಪರ್ಕಿಸಲು ತಿಳಿಸಲಾಗಿದೆ.

## ಕ್ರಯ ಪತ್ರ ಕಳೆದಿದೆ

ನಾನು ಟಿ.ಎನ್. ಅನಿಲ್ ಬಿನ್ ಟಿ.ಹೆಚ್. ನಾಗೇಂದ್ರಪ್ಪ (34 ವರ್ಷ ವಯಸ್ಸು) ನಲ್ಕುಂದ ಅಂಚೆ ಮತ್ತು ಗ್ರಾಮ, ಡೋರ್ ನಂ. 108ರಲ್ಲಿ ವಾಸವಾಗಿರುವ ನಾನು, ದೇವರ ಹೆಸರಿನಲ್ಲಿ ಪ್ರಮಾಣ ಮಾಡಿ ಹೇಳುವುದೇನೆಂದರೆ ನಾನು ಈ ಮೇಲ್ಕಂಡ ವಿಳಾಸದಲ್ಲಿ ಖಾಯಂ ವಾಸವಾಗಿರುತ್ತೇನೆ. ದಾವಣಗೆರೆ ಸಬ್ ರಿಜಿಸ್ಟರ್‌ರವರ ಆಫೀಸಿನ ಅಧಿಕಾರಕ್ಕೆ ಒಳಪಟ್ಟ ದಾವಣಗೆರೆ ತಾಲ್ಲೂಕು ಕಸಬಾ ಹೋಬಳಿ ಆವರಗೆರೆ ಗ್ರಾಮ ರೀ. ಸರ್ವೆ ನಂ. 159/2 ವಿಸ್ತೀರ್ಣ 7 ಎಕರೆಯಲ್ಲಿ ಮಾಡಿರುವ ಸೈಟ್, ಜೈನ್ ಕಾಲೇಜ್ ಹತ್ತಿರ ಬರತಕ್ಕ ಸೈಟ್ ನಂ. 16ರ ಕ್ರಯಪತ್ರ 1ನೇ ಪುಸ್ತಕದ ದಸ್ತಾವೇಜು ನಂ. D.V.G-1-15786-2021-22 ಆಗಿ ಸಿಡಿ ನಂ. DVGD 1219 ಇದರಲ್ಲಿ 18.12.2021 ರಂದು ನೋಂದಣಿಯಾಗಿರುತ್ತದೆ.

ಸದರಿ ಮೇಲ್ಕಂಡ ನಿವೇಶನ ಕ್ರಯಪತ್ರವನ್ನು ನಾನು ದಿನಾಂಕ : 18.02.2025 ರಂದು ಬೆಳಗ್ಗೆ 10 ಗಂಟೆ ಸುಮಾರಿಗೆ ದಾವಣಗೆರೆ ನಗರದ ಜೆರಾಕ್ಸ್ ಅಂಗಡಿಯಲ್ಲಿ ಕ್ರಯಪತ್ರವನ್ನು ಜೆರಾಕ್ಸ್ ಮಾಡಿಸುವ ವೇಳೆ ಕಳೆದು ಹೋಗಿರುತ್ತದೆ. ಯಾರಿಗಾದರೂ ಸಿಕ್ಕಲ್ಲಿ ಈ ಕೆಳಕಂಡ ನಂಬರ್‌ಗೆ ಸಂಪರ್ಕಿಸಿ :

**ಫೋನ್ : 97384 85871**

# ಹರಿಹರ ತಹಶೀಲ್ದಾರ್ ಕಚೇರಿಯಲ್ಲಿ ಶಿವಾಜಿ ಜಯಂತಿ



ಹರಿಹರ, ಫೆ. 21 - ನಗರದ ತಹಶೀಲ್ದಾರ್ ಕಚೇರಿಯ ಸಭಾಂಗಣದಲ್ಲಿ, ರಾಷ್ಟ್ರೀಯ ಮತ್ತು ನಾಡ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ಶ್ರೀ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಆಚರಿಸಲಾಯಿತು.

ತಹಶೀಲ್ದಾರ್ ಗುರುಬಸವರಾಜ್, ಛತ್ರಪತಿ ಶಿವಾಜಿ ಮಹಾರಾಜರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿ, ಶಿವಾಜಿ ಮಹಾರಾಜರ ಶೌರ್ಯ, ಧೈರ್ಯ ಸಾಹಸ ಮತ್ತು ಆದರ್ಶದ ಗುಣಗಳನ್ನು ಇಂದಿನ ಯುವಕರು ಮೈಗೂಡಿಸಿಕೊಂಡು ದೇಶದ ರಕ್ಷಣೆ ಮಾಡುವ ನಿಟ್ಟಿನಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು, ದೇಶ ಪ್ರೇಮವನ್ನು ಬೆಳೆಸಿಕೊಳ್ಳವಂತಾಗಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಸಮಾಜದ ಮುಖಂಡರು ತಾಲ್ಲೂಕು ಮಟ್ಟದ ಅಧಿಕಾರಿಗಳು, ಕಚೇರಿಯ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಶೋಷಿತರು ಶಿಕ್ಷಣದಿಂದ ಮುಖ್ಯವಾಹಿನಿಗೆ ಬರಬೇಕು

### ಬಂಗಾರಕ್ಕನಗುಡ್ಡ ಗ್ರಾಮದ ಕಾರ್ಯಕ್ರಮದಲ್ಲಿ ಜಗಳೂರು ಶಾಸಕ ಬಿ. ದೇವೇಂದ್ರಪ್ಪ ಆಶಯ



ಜಗಳೂರು, ಫೆ.21 - ಶೋಷಿತರು, ಶ್ರಮಿಕರ ಮಕ್ಕಳು ಶಿಕ್ಷಣದಿಂದ ಮಾತ್ರ ಮುಖ್ಯವಾಹಿನಿಗೆ ಬರಲು ಸಾಧ್ಯ ಎಂದು ಶಾಸಕ ಬಿ. ದೇವೇಂದ್ರಪ್ಪ ಹೇಳಿದರು.

ತಾಲ್ಲೂಕಿನ ಬಂಗಾರಕ್ಕನಗುಡ್ಡ ಗ್ರಾಮದ ಗ್ರಾಮ ದೇವತೆ ದೇವೀರಮ್ಮ ದೇವಿಯ ನೂತನ ಕಳಸಾರೋಹಣ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕಳೆದ ಮೂರು ದಶಕಗಳ ಹಿಂದೆ ನಿರ್ಮಾಣಗೊಳ್ಳಬೇಕಿದ್ದ ಗ್ರಾಮದೇವತೆ ದೇವಸ್ಥಾನದ ಕಟ್ಟಡ ನಿರ್ಮಾಣ ಇಂದು ಪೂರ್ಣಗೊಂಡಿದ್ದು. ದೇವಿಯ ಭಕ್ತಿಗೆ ಪಾತ್ರರಾಗಿರುವುದು ಸಂತಸದ ಸಂಗತಿ. ಗ್ರಾಮದಲ್ಲಿ ಸೋಲಾರ್ ಲೈಟ್ ನಿರ್ಮಾಣಕ್ಕೆ ಎಸ್ ಸಿಪಿ ಮತ್ತು ಟಿಎಸ್ ಪಿ ಅನುದಾನದಡಿ 5ಲಕ್ಷ, ಶಾಸಕರ ಪ್ರದೇಶಾಭಿವೃದ್ಧಿ ಯೋಜನೆಯಡಿ ಸುಸಜ್ಜಿತ ಡಿಜಿಟಲ್ ಗ್ರಂಥಾಲಯಕ್ಕೆ 30 ಲಕ್ಷ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶೌಚಾಲಯ ನಿರ್ಮಾಣಕ್ಕೆ 4.50 ಲಕ್ಷ ರೂ. ಅನುದಾನ ಒದಗಿಸಲಾಗುತ್ತಿದ್ದು, ಗ್ರಾಮಸ್ಥರು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಜಿ.ಪಂ. ಮಾಜಿ ಸದಸ್ಯ ಕೆ.ಪಿ.ಪಾಲಯ್ಯ ಮಾತನಾಡಿ, ಗ್ರಾಮದಲ್ಲಿ ಅತಿ ಹೆಚ್ಚು ಕೂಲಿಕಾರ್ಮಿಕರು ಬಡತನದಿಂದ ಜೀವನ ಸಾಗಿಸುತ್ತಿದ್ದು, ಅಂಬೇಡ್ಕರ್ ಆಶಯದಂತೆ ಮಕ್ಕಳ ಶಿಕ್ಷಣಕ್ಕೆ ಆದ್ಯತೆ ನೀಡಬೇಕು. ಸರ್ಕಾರದ ಸವಲತ್ತುಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ವಕೀಲರ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ಟಿ. ಬಸವರಾಜ್, ಬ್ಲಾಕ್ ಕಾಂಗ್ರೆಸ್ ಎಸ್ಸಿ ಘಟಕದ ಅಧ್ಯಕ್ಷ ಬಿ. ಮಹೇಶ್ವರಪ್ಪ, ದೊಣ್ಣೆಹಳ್ಳಿ ಗ್ರಾ.ಪಂ. ಅಧ್ಯಕ್ಷ ಕೆ. ತಿಪ್ಪೇಸ್ವಾಮಿ, ಸದಸ್ಯರಾದ ಅಚ್ಚಮ್ಮ, ಸಿದ್ಧಲಿಂಗಪ್ಪ, ಗುತ್ತಪ್ಪ, ಮುಖಂಡರಾದ ಜಯರಾಮಪ್ಪ, ಬಸವರಾಜ, ಶಿವಣ್ಣ, ಮಂಜುನಾಥ, ರುದ್ರೇಶ್ ಇದ್ದರು.

# ಆರೋಗ್ಯಕರ ಮನಸ್ಸು ಜೀವನದಲ್ಲಿ ಯಶಸ್ಸು : ಸ್ವಾಮಿ ಮಹಾಮೇಧಾನಂದಜೀ ಮಹಾರಾಜ್

ದಾವಣಗೆರೆ, ಫೆ.21- ಆರೋಗ್ಯಕರ ಮನಸ್ಸು ನಮ್ಮ ಜೀವನದ ಯಶಸ್ಸನ್ನು ನಿರ್ಧರಿಸುತ್ತದೆ ಎಂದು ಸ್ವಾಮಿ ಮಹಾಮೇಧಾನಂದಜೀ ಮಹಾರಾಜ್ ಪ್ರತಿಪಾದಿಸಿದರು.

ರಾಮಕೃಷ್ಣ ಮಿಷನ್ ವತಿಯಿಂದ ನಗರದ ದಾವಣಗೆರೆ - ಹರಿಹರ ಅರ್ಬನ್ ಬ್ಯಾಂಕ್ ಸಮುದಾಯ ಭವನದಲ್ಲಿ ಇಂದು ಹಮ್ಮಿಕೊಳ್ಳಲಾಗಿದ್ದ 'ವಿವೇಕ ಚಿಂತನೆ' ಕಾರ್ಯಕ್ರಮದಲ್ಲಿ ಪಾಲ್ಗೊಂಡು 'ಅಭ್ಯಾಸ ಮತ್ತು ವೈರಾಗ್ಯದ ಮರ್ಮ' ಕುರಿತು ಶ್ರೀಗಳು ಮಾತನಾಡಿದರು.

ಮನಸ್ಸು ನಮ್ಮ ಮಿತ್ರನೂ ಹೌದು, ಶತ್ರುವೂ ಹೌದು. ನಮ್ಮನ್ನು ಉದ್ಧಾರ ಮಾಡುವುದು, ಸರ್ವನಾಶ ಮಾಡುವುದೂ ಸಹ ಮನಸ್ಸೇ. ಹೀಗಾಗಿ ಮನಸ್ಸಿನ ಮೇಲೆ ನಿಯಂತ್ರಣ ಅತಿ ಮುಖ್ಯ ಎಂದರು.

ನಮ್ಮ ಮನಸ್ಸು ಪ್ರತಿ ಕ್ಷಣವೂ ಆಲೋಚನೆಗಳು ಮತ್ತು ಸಂವಾದಗಳನ್ನು ನಡೆಸುತ್ತದೆ. ಈ ಆಲೋಚನೆಗಳನ್ನು ಕೇಳಿಸಿಕೊಳ್ಳುವ ಸಾಕ್ಷಿ ಮಾತ್ರ ನಾವಾಗಿರುತ್ತೇವೆ ಎಂದರು. ನಮ್ಮ ಮನಸ್ಸಿನ ಮೇಲೆ ನಿಯಂತ್ರಣವಿದ್ದರೆ ಯಶಸ್ಸು ಸಾಧ್ಯವಿದೆ ಎಂದರು.

ಮನಸ್ಸು ಆಲೋಚನೆಗಳ ಪ್ರವಾಹ. ಮನಸ್ಸಿನ ನಿಯಂತ್ರಣಕ್ಕೆ ಯಾವಾಗಲೂ ಉದ್ಯಮಿಯಾಗಿರಬೇಕು. ಉದ್ಯಮಿಯಾಗುವುದು ಎಂದರೆ ಪ್ರತಿ ಕ್ಷಣ ಏನಾದರೂ ಕ್ರಿಯಾಶೀಲ ಕೆಲಸ ಮಾಡುತ್ತಿರಬೇಕು.



ಶಿಸ್ತು ಬದ್ಧ ದಿನಚರಿ ಮೂಲಕ ಸಮಯವನ್ನು ನಿಯಂತ್ರಿಸಬೇಕು ಹಾಗೂ ಪರೋಪಕಾರಿಗಳಾಗಿರಬೇಕು. ಸ್ನೇಹಿತರು, ನೆರೆ ಹೊರೆಯವರಿಗೆ ಏನಾದರೊಂದು ಸಹಾಯ ಮಾಡುತ್ತಿರಬೇಕು ಆಗ ಮನಸ್ಸು ಆರೋಗ್ಯಕರವಾಗಿರುತ್ತದೆ ಎಂದರು.

ಶಾಲಾ-ಕಾಲೇಜುಗಳಲ್ಲಿ ಪಠ್ಯ ಓದಿ ಹೆಚ್ಚು ಅಂಕ ಗಳಿಸುವುದಷ್ಟೇ ಬುದ್ಧಿವಂತಿಕೆ ಅಲ್ಲ. ಸ್ವತಂತ್ರವಾಗಿ ಚಿಂತನೆ ಮಾಡುವುದೇ ಬುದ್ಧಿವಂತಿಕೆ, ಆಗ ಮಾತ್ರ ನಿಜವಾದ ಯಶಸ್ಸು ಲಭಿಸುತ್ತದೆ. ಪಠ್ಯದಲ್ಲಿ ಹೆಚ್ಚು ಅಂಕ ಪಡೆದವರು ಜೀವನದಲ್ಲಿ ವೈಫಲ್ಯ ಅನುಭವಿಸಿದ ಅನೇಕ ಉದಾಹರಣೆಗಳಿವೆ ಎಂದರು. ಐಎಎಸ್, ಐಪಿಎಸ್ ಉತ್ತೀರ್ಣರಾದವರು ಜಾಣರು. ಆದರೆ ಹೆಚ್ಚಿನವರು ಪ್ರಾಮಾಣಿಕರಾಗಿ ರುವುದಿಲ್ಲ. ಯಾವುದೇ ಕ್ಷೇತ್ರವಾಗಿರಲಿ ಅಲ್ಲಿ ಪ್ರಾಮಾಣಿಕತೆ ಇರಬೇಕು ಎಂದರು.

'ಯೋಗ್ಯ ದಿನಚರಿಯಿಂದ ಮಾತ್ರ ಯಶಸ್ಸು ಸಾಧ್ಯ' ವಿಷಯ ಕುರಿತು ಮಾತನಾಡಿದ ಶಿಕ್ಷಕ ಜಗನ್ನಾಥ್ ನಾಡಿಗೇರ್, ಶಿಸ್ತು ಬದ್ಧ ಜೀವನವೇ ದಿನಚರಿ ಎಂದು ಹೇಳಿದರು.

ದಿನಚರಿಯಲ್ಲಿನ ಒಂದು ಚಿಕ್ಕ ಬದಲಾವಣೆ ನಮ್ಮ ಉನ್ನತಿಗೂ, ಅವನತಿಗೂ ಕಾರಣವಾಗಬಲ್ಲದು. ಈ ಹಿನ್ನೆಲೆಯಲ್ಲಿ ನಮ್ಮ ದಿನಚರಿ ಶಿಸ್ತುಬದ್ಧವಾಗಿರಬೇಕು ಎಂದು ಹೇಳಿದರು.

**ಮನಸ್ಸಿನ ನಿಯಂತ್ರಣಕ್ಕೆ ಉದ್ಯಮಿಯಾಗಿ, ಸಮಯ ನಿಯಂತ್ರಿಸಿ, ಪರೋಪಕಾರಿಯಾಗಿರಿ**

ವಿನೋದ್ ಕಾಂಬ್ಳಿ ಹಾಗೂ ಸಚಿನ್ ತೆಂಡೂಲ್ಕರ್ ಇಬ್ಬರೂ ಪ್ರತಿಭಾವಂತ ಆಟಗಾರರು. ಜೀವನದಲ್ಲಿ ಶಿಸ್ತು ಕಾಪಾಡಿಕೊಂಡ ಸಚಿನ್ ಎಲ್ಲರ ಮನೆ ಮಾತಾದರು. ಆದರೆ ಅಶಿಸ್ತಿನ ಕಾರಣ ಕಾಂಬ್ಳಿ ತೆರೆ ಮರೆಗೆ ಸರಿಯಬೇಕಾಯಿತು ಎಂದು ಉದಾಹರಿಸಿದರು. ದಿನಚರ್ಯ, ಸಹಚರ್ಯ ಹಾಗೂ ಬ್ರಹ್ಮಚರ್ಯ ಈ ಮೂರೂ ಯಶಸ್ವಿ ಜೀವನಕ್ಕೆ ಅತ್ಯಗತ್ಯ. ಏಣಿ ಹತ್ತಲು ಪ್ರತಿಭೆ ಬೇಕು. ಆದರೆ ಅದರ ಮೇಲೆ ನಿಲ್ಲಲು ಉತ್ತಮ ದಿನಚರಿ ಅಗತ್ಯ. ಹೀಗಾಗಿ ಬೆಳಿಗ್ಗೆ ಎದ್ದಾಗಿನಿಂದ ಮಲಗುವವರೆಗೆ ಶಿಸ್ತು ಬದ್ಧ ದಿನಚರಿ ರೂಪಿಸಿಕೊಳ್ಳಬೇಕು ಎಂದರು.

ಉತ್ತಮ ಆಹಾರ ಪದ್ಧತಿ ವಿದ್ಯಾರ್ಥಿಗಳಿಗೆ ಅತಿ ಮುಖ್ಯ. ಸಾತ್ವಿಕ ಆಹಾರದಿಂದ ಏಕಾಗ್ರತೆ ಹೆಚ್ಚುತ್ತದೆ. ಅದರಂತೆ ಉತ್ತಮ ನಿದ್ರೆಯೂ ಮುಖ್ಯ. ನಾವು ಎಷ್ಟು ಗಂಟೆ ಮಲಗುತ್ತೇವೆ ಎಂಬುದಕ್ಕಿಂತ ಎಷ್ಟು ಹೊತ್ತು ನಿದ್ರಿಸುತ್ತೇವೆ ಎಂಬುದು ಮುಖ್ಯ ಎಂದರು.

ಕಥೆಯೊಂದರ ಮೂಲಕ ಉತ್ತಮ ಸ್ನೇಹಿತರ ಮಹತ್ವ ತಿಳಿಸಿಕೊಟ್ಟ ನಾಡಿಗೇರ್, ಜೀವನದಲ್ಲಿ ಯಶಸ್ಸು ಕಾರಣಲೂ ಉತ್ತಮ ಸ್ನೇಹಿತರೂ ಮುಖ್ಯ ಎಂದು ಹೇಳಿದರು. ಸದ್ ಗ್ರಂಥಗಳನ್ನು ಓದುವ ಅಭ್ಯಾಸ ರೂಢಿಸಿಕೊಳ್ಳುವಂತೆಯೂ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

**ನಮ್ಮ ಜೊತೆಗೆ ನಾವು ಸ್ಪರ್ಧೆ ಮಾಡಿದಾಗ ಮನಸ್ಸು ಆರೋಗ್ಯಕರವಾಗಿರುತ್ತದೆ. ಬೇರೆಯವರೊಂದಿಗೆ ಸ್ಪರ್ಧೆ ಮಾಡಿದಾಗ ಅಸೂಯೆ, ಅಹಂಕಾರ ಹೆಚ್ಚಾಗುತ್ತದೆ. ಸ್ವಾರ್ಥ ಹಾಗೂ ಅಹಂಕಾರ ಕೈ ಬಿಡಬೇಕು.**
**- ಸ್ವಾಮಿ ಮಹಾಮೇಧಾನಂದಜೀ ಮಹಾರಾಜ್**

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮೈಸೂರು ರಾಮಕೃಷ್ಣ ಮಿಷನ್ ಅಧ್ಯಕ್ಷರಾದ ಸ್ವಾಮಿ ಮುಕ್ತಿದಾನಂದಜೀ ಮಹಾರಾಜ್ ಅಧ್ಯಕ್ಷತೆ ವಹಿಸಿ ಆಶೀರ್ವಚನ ನೀಡಿದರು.

ರಾಮಕೃಷ್ಣ ಮಿಷನ್‌ನ ಕಾರ್ಯದರ್ಶಿ ಶ್ರೀ ಸ್ವಾಮಿ ತ್ಯಾಗೀಶ್ವರಾನಂದರು ಉಪಸ್ಥಿತರಿದ್ದರು. ಸ್ವಾಮಿ ತೀರ್ಥಂಕರಾನಂದ ಮಹಾರಾಜ್ ವಂದಿಸಿದರು. ಕು.ಶಾರದ ಸ್ವಾಗತಿಸಿದರು. ಮಧ್ಯಾಹ್ನ ಶಿಕ್ಷಕರಿಗಾಗಿ ವಿಚಾರಗೋಷ್ಠಿ ಹಾಗೂ ಸಂಜೆ ಭಕ್ತರಿಗಾಗಿ ಭಕ್ತಿ ರಸಗಂಗೆ ನಡೆಯಿತು. ವಿವೇಕ ಹಂಸ ಬಳಗದವರು ವಿಶೇಷ ಭಜನೆ ನಡೆಸಿಕೊಟ್ಟರು.

# ವಿದ್ಯಾರ್ಥಿಗಳ ಭವಿಷ್ಯಕ್ಕೆ ಶಿಕ್ಷಣ ಭದ್ರ ಬುನಾದಿ

## ವಿದ್ಯಾನಿಕೇತನ ಆಂಗ್ಲ ಮಾಧ್ಯಮ ಪಬ್ಲಿಕ್ ಶಾಲಾ ಕಾರ್ಯಕ್ರಮದಲ್ಲಿ ರವಿನಾರಾಯಣ್



ದಾವಣಗೆರೆ, ಜ. 21- ಪ್ರಾಥಮಿಕ ಶಿಕ್ಷಣ ಉಚಿತ ಹಾಗೂ ಕಡ್ಡಾಯವಾಗಿದ್ದು, ಕೊಂಡುಕೊಳ್ಳಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಮರಕ್ಕೆ ಬೇರು, ಕಟ್ಟಡಕ್ಕೆ ಬುನಾದಿ ಎಷ್ಟು ಮುಖ್ಯವೋ ಹಾಗೆಯೇ ವಿದ್ಯಾರ್ಥಿಗಳ ಭವಿಷ್ಯಕ್ಕೆ ಶಿಕ್ಷಣವೇ ಭದ್ರ ಬುನಾದಿಯಾಗಿದೆ ಎಂದು ವಿಶ್ರಾಂತ ಪೊಲೀಸ್ ವರಿಷ್ಠಾಧಿಕಾರಿ ರವಿನಾರಾಯಣ್ ತಿಳಿಸಿದರು.

ಸ್ಥಳೀಯ ಕುವೆಂಪು ಕನ್ನಡ ಭವನದಲ್ಲಿ ಕಳೆದ ವಾರ ಏರ್ಪಾಡಾಗಿದ್ದ ಜಯನಗರ 'ಎ' ಬ್ಲಾಕ್‌ನಲ್ಲಿರುವ ವಿದ್ಯಾನಿಕೇತನ ಆಂಗ್ಲ ಮಾಧ್ಯಮ ಪಬ್ಲಿಕ್ ಶಾಲೆಯ ವಾರ್ಷಿಕೋತ್ಸವ ಸಮಾರಂಭದಲ್ಲಿ ಜ್ಯೋತಿ ಬೆಳಗಿಸಿ ಅವರು ಮಾತನಾಡಿದರು.

ಪಾಲಕರು ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸುವುದರ ಮೂಲಕ ಮಕ್ಕಳ ಭವಿಷ್ಯ ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಬೇಕು. ವಿಶೇಷವಾಗಿ ಜನನಿ ತಾನೇ ಮೊದಲ ಗುರು ಎಂಬಂತೆ ಮಕ್ಕಳ ಭವ್ಯ ಭವಿಷ್ಯ ನಿರ್ಮಾಣದಲ್ಲಿ ತಾಯಂದಿರ ಪಾತ್ರ ಮುಖ್ಯವಾಗಿದ್ದು, ಮಕ್ಕಳಲ್ಲಿ ಶಿಸ್ತು ರೂಪಿಸುವುದರ ಜೊತೆಗೆ, ಸಮರ್ಪಣಾ ಭಾವನೆಯೊಂದಿಗೆ ಮಕ್ಕಳ ದೊಡ್ಡ ದೊಡ್ಡ ಕನಸನ್ನು ನನಸಾಗಬೇಕೆಂದು ರವಿನಾರಾಯಣ್ ತಿಳಿಸಿದರು.

ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿದ್ದ ಆವರಗೊಳ್ಳ ಪುರವರ್ಗ ಮಠದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ತಮ್ಮ ಆಶೀರ್ವಚನದಲ್ಲಿ, ಅತ್ಯಂತ ಕಡಿಮೆ ಶುಲ್ಕ ಪಡೆದು ಮಕ್ಕಳಿಗೆ ಅತ್ಯುತ್ತಮ ಶಿಕ್ಷಣ ನೀಡುತ್ತಿರುವ ಈ ಶಿಕ್ಷಣ ಸಂಸ್ಥೆಗೆ ತಮ್ಮ ಮಕ್ಕಳನ್ನು ಸೇರಿಸುವುದರ ಮೂಲಕ ಸಂಸ್ಥೆಯನ್ನು ಅಭಿವೃದ್ಧಿಪಡಿಸಬೇಕೆಂದು ಪಾಲಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ತಿಳಿಸಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಹಿರಿಯ ನ್ಯಾಯವಾದಿ ಬಿ.ಎಂ. ಹನುಮಂತಪ್ಪ ಮಾತನಾಡಿ, ಡಾ. ಅಂಬೇಡ್ಕರ್ ಅವರು ಬಾಲ್ಯದಲ್ಲಿ ತುಂಬಾ ಕಷ್ಟ ಅನುಭವಿಸಿ ಹಲವು ಪದವಿ ಪಡೆಯುವುದರ ಮೂಲಕ ಉನ್ನತ ಶಿಕ್ಷಣ ಪಡೆದರು. ಮಾನವನ ಸರ್ವಾಂಗೀಣ ಪ್ರಗತಿಗೆ ಶಿಕ್ಷಣ ಅತಿ ಮುಖ್ಯವಾಗಿದ್ದು, ಪೋಷಕರು ಶಿಕ್ಷಣಕ್ಕೆ ಪ್ರಾಮುಖ್ಯತೆ ನೀಡಬೇಕೆಂದರು.

ವಿದ್ಯಾನಿಕೇತನ ಆಂಗ್ಲ ಮಾಧ್ಯಮ ಪಬ್ಲಿಕ್ ಶಾಲೆಯ ಆಡಳಿತಾಧಿಕಾರಿ ಕೆ.ಬಿ. ಆನಂದ್ ಮಾತನಾಡಿ, ಪೋಷಕರು ತಮ್ಮ ಮಕ್ಕಳ ಮೇಲೆ ಅತಿಯಾದ ನಂಬಿಕೆ ಹೊಂದದೆ, ಅವರ ಚಲನವಲನಗಳ ಬಗ್ಗೆ ಗಮನ ನೀಡಬೇಕೆಂದು ಕರೆ ನೀಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ವಿದ್ಯಾನಿಕೇತನ ಆಂಗ್ಲ ಮಾಧ್ಯಮ ಪಬ್ಲಿಕ್ ಶಾಲೆಯ ಸಂಸ್ಥಾಪಕರೂ ಆದ ವಿಶ್ರಾಂತ ಡಿಡಿಪಿಐ ರುದ್ರಮುನಿ ಮಾತನಾಡಿ, ವಿದ್ಯೆ ಸಾಧಕನ ಸ್ವತ್ತೇ ಹೊರತು ಸೋಮಾರಿಯ ಸ್ವತ್ತಲ್ಲ ಎಂದು ಹೇಳಿದರು. ಕಳೆದ ಎರಡು ವರ್ಷಗಳಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ. 100 ಫಲಿತಾಂಶ ಬಂದಿದ್ದು, ಶ್ರಮ ವಹಿಸಿದ ಶಿಕ್ಷಕರಿಗೆ ವಂದನೆ ಸಲ್ಲಿಸಿದರು.

ಶಾಲೆಯ ಕಾರ್ಯದರ್ಶಿ ಮಂಜುನಾಥ ಹೆಗಡೆ ಉಪಸ್ಥಿತರಿದ್ದರು. ಶ್ರೀಮತಿ ವಂದನಾ ಕುಲಕರ್ಣಿ ಪ್ರಾರ್ಥಿಸಿದರು. ಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ಆರ್. ಮೀನಾಕ್ಷಿ ಸ್ವಾಗತಿಸಿದರು. ಶಿಕ್ಷಕ ರೇಣುಕಾರಾಧ್ಯ ವಾರ್ಷಿಕ ವರದಿ ವಾಚಿಸಿದರು. ಶ್ರೀಮತಿ ಶಕುಂತಲಾ ವಂದಿಸಿದರು. ಶ್ರೀಮತಿ ನಿರ್ಮಲಾ ಕಾರ್ಯಕ್ರಮ ನಿರೂಪಿಸಿದರು.


# ರಮೇಶ್ ಜಹಗರ್‌ದಾರ್ ಅವರಿಗೆ ಮಾಧ್ಯಮ ಅಕಾಡೆಮಿ ಪ್ರಶಸ್ತಿ ಪ್ರದಾನ




ಬೆಂಗಳೂರು, ಫೆ. 21 - ಕರ್ನಾಟಕ ಮಾಧ್ಯಮ ಅಕಾಡೆಮಿ ವತಿಯಿಂದ ಬೆಂಗಳೂರಿನ ಐ.ಐ.ಎಸ್.ಸಿ. ಆವರಣದ ಜೆ.ಎನ್. ಟಾಟಾ ಸಭಾಂಗಣದಲ್ಲಿ ಕಳೆದ ವಾರ ಆಯೋಜಿಸಿದ್ದ ಕರ್ನಾಟಕ ಮಾಧ್ಯಮ ಅಕಾಡೆಮಿಯ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ವಿಜಯವಾಣಿಯ ದಾವಣಗೆರೆ ವಿಶೇಷ ವರದಿಗಾರ ರಮೇಶ್ ಜಹಗೀರದಾರ್ ಅವರಿಗೆ ಕರ್ನಾಟಕ ಮಾಧ್ಯಮ ಅಕಾಡೆಮಿಯ 2024 ನೇ ಸಾಲಿನ ವಾರ್ಷಿಕ ಪ್ರಶಸ್ತಿಯನ್ನು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರದಾನ ಮಾಡಿದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು, ಮಾಧ್ಯಮ ಅಕಾಡೆಮಿ ಸದಸ್ಯ ಇ.ಎಂ. ಮಂಜುನಾಥ ಮತ್ತಿತರರು ಉಪಸ್ಥಿತರಿದ್ದರು.


॥ ಶ್ರೀ ಗಣೇಶಾಯ ನಮಃ ॥



## ದೈವಜ್ಞ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ದಾವಣಗೆರೆ



**ಚುನಾವಣೆ : 2025-30**

ಆತ್ಮೀಯ ಮತದಾರ ಬಂಧುಗಳಲ್ಲಿ ವಿನಂತಿ,

ದೈವಜ್ಞ ಸಮಾಜದ ಹಿರಿಯರು, ಸಮಾಜದ ಹಿತೈಷಿಗಳು, ಸಮಾಜದ ಚಿಂತಕರು ಸೇರಿ ಸಮಾಜದ ಸರ್ವತೋಮುಖ ಅಭಿವೃದ್ಧಿಗಾಗಿ ದೈವಜ್ಞ ಕ್ರೆಡಿಟ್ ಕೋ-ಆಪ್ ಸೊಸೈಟಿ ಲಿ., ಸ್ಥಾಪಿಸಿ ಅಭಿವೃದ್ಧಿ ಪಡಿಸಿ ಸಮಾಜದ ಸರ್ವರಿಗೂ ಅನುಕೂಲವಾಗುವಂತೆ ಶ್ರಮಿಸಿರುತ್ತಾರೆ. ಹಿರಿಯರು ನಡೆಸಿದ ಹಾದಿಯಲ್ಲಿಯೇ ನಾವುಗಳೂ ಸಹ ಸೊಸೈಟಿಯನ್ನು ಇನ್ನೂ ಹೆಚ್ಚು ಅಭಿವೃದ್ಧಿ ಪಡಿಸುವ ಮತ್ತು ದಾವಣಗೆರೆಯ ಸೊಸೈಟಿಗಳಲ್ಲಿ ಉನ್ನತ ಸ್ಥಾನವನ್ನು ಪಡೆಯುವ ಆಶಯದಂತೆ ಇಲ್ಲಿಯವರೆಗೂ ನಡೆಸಿಕೊಂಡು ಬಂದಿರುತ್ತೇವೆ.

ದೈವಜ್ಞ ಕ್ರೆಡಿಟ್ ಕೋ-ಆಪ್ ಸೊಸೈಟಿ ಲಿ., ಮುಂದಿನ 2025-30 ರ 5 ವರ್ಷಗಳ ಅವಧಿಗಾಗಿ ದಿನಾಂಕ : 22.02.2025ರಂದು ನಡೆಯಲಿರುವ ಆಡಳಿತ ಮಂಡಳಿಯ ನಿರ್ದೇಶಕರ ಚುನಾವಣೆಯಲ್ಲಿ ಈ ಕೆಳಕಂಡ ನಾವುಗಳು ಪ್ರಶಾಂತ್ ವಿ. ವೆರ್ಣೇಕರ್ (ಹೆಗಡೆ) ಇವರ ನೇತೃತ್ವದಲ್ಲಿ ಸ್ಪರ್ಧಿಸಿದ್ದು, ತಾವುಗಳು ತಮ್ಮ ಅಮೂಲ್ಯವಾದ ಮತವನ್ನು ನಮಗೆ ನೀಡಿ ಜಯಶೀಲರನ್ನಾಗಿ ಮಾಡಿ ಸೊಸೈಟಿಯ ಸರ್ವತೋಮುಖ ಅಭಿವೃದ್ಧಿಗಾಗಿ ಸೇವೆ ಸಲ್ಲಿಸುವ ಅವಕಾಶವನ್ನು ಕಲ್ಪಿಸಿಕೊಡಬೇಕಾಗಿ ವಿನಂತಿಸುತ್ತೇವೆ.

| ಕ್ರ.ಸಂ. | | ಹೆಸರು | ಸ್ಥಾನ ಮತ್ತು ಗುರುತು | ಚಿಹ್ನೆಗಳು | |
|---|---|---|---|---|---|
| 1 | | **ದೇವಿದಾಸ್ ಎಸ್. ಶೇಟ್ (ಕೆಕ್ಕಾರ್)** ಬಿ.ಎ. ಎಲ್.ಎಲ್.ಬಿ.<br>ಮಾಲೀಕರು : ರಾಘವೇಂದ್ರ ಜ್ಯೂಯಲರ್ಸ್, ಒಕ್ಕಲಿಗರಪೇಟೆ,<br>ಸಂಸ್ಥಾಪಕರು : ಚಿನ್ನ, ಬೆಳ್ಳಿ ಕೆಲಸಗಾರರ ಸಂಘ, ದಾವಣಗೆರೆ. | ಹಿಂದುಳಿದ ಪ್ರವರ್ಗ-ಎ<br>ಕೊಳಾಯಿ | | |
| 2 | | **ನಾಗೇಶ್ ಎಂ. ಶೇಟ್ (ನಲ್ಲೂರು)** ಬಿ.ಇ. ಎಂ.ಬಿ.ಎ.<br>ಮಾಲೀಕರು : ವಿಮಲೇಶ್ವರ ಜ್ಯೂಯಲರ್ಸ್, ಮಂಡಿಪೇಟೆ<br>ಖಜಾಂಚಿ : ದೈವಜ್ಞ ವಿದ್ಯಾ ಸಂಸ್ಥೆ, ದಾವಣಗೆರೆ. | ಸಾಮಾನ್ಯ<br>ಗಾಳಿಪಟ | | |
| 3 | | **ಪ್ರಶಾಂತ್ ವಿ. ವೆರ್ಣೇಕರ್ (ಹೆಗಡೆ)**<br>ಹಾಲಿ ಅಧ್ಯಕ್ಷರು : ದೈವಜ್ಞ ಕ್ರೆಡಿಟ್ ಕೋ-ಆಪ್ ಸೊಸೈಟಿ ಲಿ.,<br>ಅಧ್ಯಕ್ಷರು : ದೈವಜ್ಞ ಸಮಾಜ ಸಂಘ, ದಾವಣಗೆರೆ. | ಸಾಮಾನ್ಯ<br>ದ್ರಾಕ್ಷಿ ಗೊಂಚಲು | | |
| 6 | | **ರಮಾಕಾಂತ್ ಎಸ್. ವೆರ್ಣೇಕರ್, (ಬ್ಯಾಡಗಿ)** ಬಿ.ಎ.<br>ಮಾಲೀಕರು : ಮಾಳ್ಸಾ ಡೆವಲಪರ್ಸ್<br>ಜಿಲ್ಲಾ ಉಪಾಧ್ಯಕ್ಷರು : CREDAI Real Estate, ದಾವಣಗೆರೆ | ಸಾಮಾನ್ಯ<br>ಕಪ್ಪು ಸಾಸರ್ | | |
| 7 | | **ರಾಜೀವ್ ವಿ. ವೆರ್ಣೇಕರ್ (PBV)**<br>ಹಾಲಿ ಉಪಾಧ್ಯಕ್ಷರು : ದೈವಜ್ಞ ಕ್ರೆಡಿಟ್ ಕೋ-ಆಪ್ ಸೊಸೈಟಿ ಲಿ.,<br>ಮಾಲೀಕರು, ಪಾಂಡುರಂಗಪ್ಪ ಬೊಮ್ಮಯ ಜ್ಯೂಯಲರ್ಸ್, ದೊಡ್ಡಪೇಟೆ , ದಾವಣಗೆರೆ. | ಸಾಮಾನ್ಯ<br>ಕಿರೀಟ | | |
| 9 | | **ರಾಜೇಶ್ ಪಿ. ರೇವಣಕರ್ (ನಲ್ಲೂರು)** ಬಿ.ಇ.<br>ನಿರ್ದೇಶಕರು, : ದೈವಜ್ಞ ಸಮಾಜ ಸಂಘ, ದಾವಣಗೆರೆ.<br>ಮಾಲೀಕರು, ವಿಶ್ವಾಸ ಜ್ಯೂಯಲರ್ಸ್, ಗಡಿಯಾರ ಕಂಬ, ದಾವಣಗೆರೆ. | ಸಾಮಾನ್ಯ<br>ಉಂಗುರ | | |
| 10 | | **ರಾಘವೇಂದ್ರ ಎನ್. ದಿವಾಕರ್ (ಹಡಗಲಿ)**<br>ಹಾಲಿ ನಿರ್ದೇಶಕರು : ದೈವಜ್ಞ ಕ್ರೆಡಿಟ್ ಕೋ-ಆಪ್ ಸೊಸೈಟಿ ಲಿ.,<br>ಅಧ್ಯಕ್ಷರು : ದೈವಜ್ಞ ಯುವಸೇವಾ ಮಂಡಳಿ, ದಾವಣಗೆರೆ | ಸಾಮಾನ್ಯ<br>ಟೆಲಿಫೋನ್ | | |
| 13 | | **ವಿಶ್ವನಾಥ ಡಿ.ಎ. (ಕುಂಬಳೂರು)**<br>ನಾಮ ನಿರ್ದೇಶಕರು : ದೈವಜ್ಞ ಕ್ರೆಡಿಟ್ ಕೋ-ಆಪ್ ಸೊಸೈಟಿ ಲಿ.,<br>ಉಪಾಧ್ಯಕ್ಷರು: ದೈವಜ್ಞ ಹಿತರಕ್ಷಣಾ ವೇದಿಕೆ, ದಾವಣಗೆರೆ | ಹಿಂದುಳಿದ ಪ್ರವರ್ಗ-ಎ<br>ಕ್ಯಾಲ್ಕುಲೇಟರ್ | | |
| 14 | | **ವೀಣಾ ಜಿ.ಬುರುಡೆ (ಗುರುನಾಥ ಬುರುಡೆ)**<br>ನಿರ್ದೇಶಕಿ: ನವಶಕ್ತಿ ಭಜನಾ ಮಂಡಳಿ, ದಾವಣಗೆರೆ | ಮಹಿಳಾ ಮೀಸಲು<br>ಆಟೋರಿಕ್ಷಾ | | |
| 15 | | **ಶಾರದ ಕೆ. ಕುಡ್ತರಕರ್** ಬಿ.ಕಾಂ., **(ಕಷ್ಣಮೂರ್ತಿ ಜಿ. ಕುಡ್ತರಕರ್)**<br>ಖಜಾಂಚಿ : ಜ್ಞಾನೇಶ್ವರಿ ಮಹಿಳಾ ಮಂಡಳಿ, ದಾವಣಗೆರೆ. | ಮಹಿಳಾ ಮೀಸಲು<br>ಹೊಲಿಗೆ ಯಂತ್ರ | | |
| 16 | | **ಸತೀಶ್ ಎಸ್. ಸಾನು (ಮುಂಡಗೋಡ)**<br>ಹಾಲಿ ನಿರ್ದೇಶಕರು , ದೈವಜ್ಞ ಕ್ರೆಡಿಟ್ ಕೋ-ಆಪ್ ಸೊಸೈಟಿ ಲಿ.,<br>ಕಾರ್ಯದರ್ಶಿ :ದೈವಜ್ಞ ಸಮಾಜ ಸಂಘ, ದಾವಣಗೆರೆ. | ಸಾಮಾನ್ಯ<br>ಟೇಬಲ್ | | |

ತಮ್ಮ ಸೇವಾಕಾಂಕ್ಷಿಗಳು,

**ಪ್ರಶಾಂತ್ ವಿ. ವೆರ್ಣೇಕರ್ (ಹೆಗಡೆ) ಮತ್ತು ಗ್ರೂಪ್**

# ಬೆಲೆ ಏರಿಕೆ ಕಡಿತಗೊಳಿಸುವಂತೆ ಉಭಯ ಸರ್ಕಾರಕ್ಕೆ ಎಎಪಿ ಎಚ್ಚರಿಕೆ

ದಾವಣಗೆರೆ, ಫೆ.21- ರಾಜ್ಯ ಹಾಗೂ ಕೇಂದ್ರ ಸರ್ಕಾರ ಬೆಲೆ ಏರಿಕೆಯನ್ನು ಕೂಡಲೇ ಕಡಿತಗೊಳಿಸದಿದ್ದರೇ ಆಮ್ ಆದ್ಮಿ ಪಕ್ಷ ಬೀದಿಗಿಳಿದು ಪ್ರತಿಭಟನೆ ಮಾಡಲಿದೆ ಎಂದು ಪಕ್ಷದ ಜಿಲ್ಲಾಧ್ಯಕ್ಷ ಕೆ.ಎಸ್. ಶಿವಕುಮಾರಪ್ಪ ಉಭಯ ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷವು ತನ್ನ ಪಂಚ ಗ್ಯಾರಂಟಿಗಳ ಮುಖೇನ ಸಾರ್ವಜನಿಕರ ಮೂಗಿಗೆ ತುಪ್ಪ ಸವರುತ್ತಾ ಜನರನ್ನು ಸುಲಿಗೆ ಮಾಡುತ್ತಿದೆ. ಆಸ್ತಿ ತೆರಿಗೆ ಶುಲ್ಕ, ವಾಹನ ನೋಂದಣಿ ಶುಲ್ಕ, ಸಾರಿಗೆ ಪ್ರಯಾಣ ದರ, ನೀರಿನ ಸುಂಕ, ಆರೋಗ್ಯ ಸೇವಾ ಶುಲ್ಕ, ವಿದ್ಯುತ್ ಹಾಗೂ ಲಿಕ್ಕರ್ ಸೇರಿದಂತೆ ಇನ್ನೂ ಅನೇಕ ವಲಯ ಹಾಗೂ ಸೇವೆಗಳ ಮೇಲೆ ಬೆಲೆ ಏರಿಕೆಗೊಳಿಸಿ ನಾಗರಿಕರಿಗೆ ತೊಂದರೆ ಮಾಡುತ್ತಿದೆ ಎಂದು ದೂರಿದರು.

ಕೇಂದ್ರ ಬಿಜೆಪಿ ಸರ್ಕಾರವು ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ, ರೈಲು ದರ ಸೇರಿದಂತೆ ಅನೇಕ ವಸ್ತುವಿನ ಬೆಲೆ ಏರಿಕೆಗೊಳಿಸಿ ಜನ ವಿರೋಧಿ ನಡೆಯನ್ನು ಅನುಸರಿಸುತ್ತಿದೆ ಎಂದು ಆರೋಪಿಸಿದರು.

ಕೇಂದ್ರ ಸರ್ಕಾರ ಮಂಡಿಸಿದ ಮೊನ್ನೆಯ ಬಜೆಟ್‌ನಲ್ಲಿ 12 ಲಕ್ಷದ ವರೆಗೂ ತೆರಿಗೆ ವಿನಾಯಿತಿ ನೀಡುವ ಮೂಲಕ ಮಧ್ಯಮ ವರ್ಗಕ್ಕೆ ಅನುಕೂಲ ಮಾಡಿದೆ ಎಂದು ಪ್ರಶಂಸಿಸಿದರು.

ಮಾರ್ಚ್ 7ಕ್ಕೆ ಮಂಡಿಸುವ ರಾಜ್ಯ ಬಜೆಟ್‌ನಲ್ಲಿ ಬೆಲೆ ಏರಿಕೆ ಕಡಿತಗೊಳಿಸಬೇಕು ಮತ್ತು ದಾವಣಗೆರೆ ಜಿಲ್ಲೆಗೆ ಅನುಕೂಲ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ಈ ವೇಳೆ ಆಮ್ ಆದ್ಮಿ ಪಕ್ಷದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಆದಿಲ್ ಖಾನ್, ಸಿದ್ಲಪ್ಪ ಸುರೇಶ್, ಕೆ. ರವೀಂದ್ರ ಸುದ್ದಿಗೋಷ್ಠಿಯಲ್ಲಿದ್ದರು.



# ಕಲಿಕೆ ಎಂದರೆ ಕೇವಲ ಅಕ್ಷರ ಮಾತ್ರವಲ್ಲ

**ಸೇಂಟ್‌ಜಾನ್ಸ್ ಶಾಲೆಯ ಕಾರ್ಯಕ್ರಮದಲ್ಲಿ ಪೊಲೀಸ್ ವೃತ್ತ ನಿರೀಕ್ಷಕ ನಲವಾಗಲು ಮಂಜುನಾಥ**

ದಾವಣಗೆರೆ, ಫೆ. 21 - ಮಕ್ಕಳ ಸರ್ವಾಂಗೀಣ ಅಭಿವೃದ್ಧಿಯಾಗಲು ಪಠ್ಯದ ಜೊತೆಗೆ ಕ್ರೀಡಾ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು ಎಂದು ಪೊಲೀಸ್ ವೃತ್ತ ನಿರೀಕ್ಷಕ ನಲವಾಗಲು ಮಂಜುನಾಥ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ನಗರದ ಸೇಂಟ್‌ಜಾನ್ಸ್ ವಿದ್ಯಾಸಂಸ್ಥೆಯಲ್ಲಿ ವಾರ್ಷಿಕ ಕ್ರೀಡಾಕೂಟದ ಸಮಾರೋಪ ಸಮಾರಂಭದ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಅವರು ಕ್ರೀಡಾ ಜ್ಯೋತಿಯನ್ನು ಬೆಳಗಿಸುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಕೋಣೆ ಮಗು ಕೊಳಿತು ; ಬೀದಿ ಮಗು ಬಲಿತು ಎಂಬ ಗಾದೆ ಮಾತನ್ನು ನಿದರ್ಶನ ನೀಡಿ, ಕಲಿಕೆ ಎಂದರೆ ಕೇವಲ ಅಕ್ಷರ ಮಾತ್ರವಲ್ಲ ಎಂದರು.

ಈ ಕಾರ್ಯಕ್ರಮದಲ್ಲಿ ವಿದ್ಯಾಸಂಸ್ಥೆಯ ಅಧ್ಯಕ್ಷ ಹೆಚ್. ಅನಿಲ್‌ಕುಮಾರ್, ಕಾರ್ಯದರ್ಶಿ ಟಿ.ಎಮ್ ಉಮಾಪತಯ್ಯ, ಖಜಾಂಚಿ ಪ್ರವೀಣ್ ಹುಲ್ಲುಮನೆ ಉಪಸ್ಥಿತರಿದ್ದರು.

ಕ್ರೀಡಾ ಕಾರ್ಯಕ್ರಮದಲ್ಲಿ ಶಾಲೆಯ ಪ್ರಾಂಶುಪಾಲ ಸಯ್ಯದ್ ಆರಿಫ್ ಆರ್. ಅವರು ಕಾರ್ಯಕ್ರಮದ ಅಧ್ಯಕ್ಷೀಯ ನುಡಿಗಳನ್ನಾಡುತ್ತಾ ಮಕ್ಕಳಿಗೆ ಕ್ರೀಡೆಗಳಲ್ಲಿ ಭಾಗವಹಿಸುವಂತೆ ಪ್ರೋತ್ಸಾಹಿಸಿದರು.

ಶಾಲಾ ವಾರ್ಷಿಕ ಕ್ರೀಡಾಕೂಟದಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

ಪ್ರಾಂಶುಪಾಲರಾದ ಶ್ರೀಮತಿ ಪ್ರೀತಾ. ಟಿ. ರೈ, ಉಪ ಪ್ರಾಂಶುಪಾಲರಾದ ಶ್ರೀಮತಿ ಎಸ್. ಎಮ್. ನೇತ್ರಾವತಿ, ಸಂಯೋಜಕರಾದ ಎಂ.ಎಸ್. ರೂಪ ಹಾಗೂ ಇತರರು ಪಾಲ್ಗೊಂಡಿದ್ದರು.

# ರಾಜ್ಯದ ಮೀಸಲಾತಿ ಪ್ರಮಾಣ ಹೆಚ್ಚಲಿ

**(1ನೇ ಪುಟದಿಂದ)** ನೋಡಿ ತಪ್ಪು ಮಾಹಿತಿ ಹೇಳಬೇಡಿ. ಮಕ್ಕಳಿಗೆ ಸರಿಯಾದ ಇತಿಹಾಸ ತಿಳಿಸಬೇಕು. ಎಲ್ಲಾ ಧರ್ಮ, ಜಾತಿಗಳ ಜನರು ಒಂದೇ ತಾಯಿಯ ಮಕ್ಕಳಂತೆ ಸಹೋದರತ್ವದಿಂದ ಬಾಳಿ ಬದುಕಬೇಕು ಎಂದು ಹೇಳಿದರು.

ಶಿವಾಜಿ ಜಯಂತಿಯಿಂದ ಹಾಗೂ ಗುಡಿ-ಗುಂಡಾರಕ್ಕೆ ಅನುದಾನ ಕೇಳುವುದರಿಂದ ಸಮಾಜ ಅಭಿವೃದ್ಧಿಯಾಗಲ್ಲ. ಮಕ್ಕಳಿಗೆ ಶಿಕ್ಷಣದ ಜತೆಗೆ ವ್ಯವಹಾರದ ಕೌಶಲ್ಯ ಕಲಿಸಬೇಕು. ನೀವು ಬಯಸಿದರೆ ಉದ್ಯೋಗ ಮೇಳ ಆಯೋಜಿಸಿ ನಮ್ಮ ಸಮುದಾಯದ ಯುವಕರಿಗೆ ಉದ್ಯೋಗ ಕಲ್ಪಿಸಲು ಪ್ರಯತ್ನಿಸುತ್ತೇನೆ ಎಂದರು.

ಮಾಜಿ ಸಚಿವ ಪಿ.ಜಿ.ಆರ್. ಶಿಂಧ್ಯಾ ಮಾತನಾಡಿ, ಕಾಂತರಾಜ್ ವರದಿ ಆಧಾರದ ಮೇಲೆ ಜನಸಂಖ್ಯೆಗೆ ಅನುಗುಣವಾಗಿ ಒಳ ಮೀಸಲು ನೀಡಬೇಕು. ನಮಗೆ ಮೀಸಲಾತಿ ನೀಡದ ಕಾರಣ ನಮ್ಮ ಮಕ್ಕಳು ಐಪಿಎಸ್, ಐಎಎಸ್ ಮಾಡಲಾಗುತ್ತಿಲ್ಲ ಎಂಬ ತಪ್ಪು ಕಲ್ಪನೆಯಿಂದ ಹೊರ ಬನ್ನಿ. ಏಕೆಂದರೆ ಮೀಸಲಾತಿಯಿಂದ ಕ್ರಾಂತಿಯಾಗಲ್ಲ. ಮಕ್ಕಳಿಗೆ ಶಿಕ್ಷಣ ಕೊಡಿಸಿ ಅವರನ್ನು ವ್ಯಾಪಾರ-ವಹಿವಾಟಿನಲ್ಲಿ ತೊಡಗಿಸಿ ಎಂದು ಸಲಹೆ ನೀಡಿದರು.

ಮಾಜಿ ಸಂಸದ ಜಿ.ಎಂ. ಸಿದ್ದೇಶ್ವರ ಮಾತನಾಡಿ, ಸ್ವಾಭಿಮಾನದಿಂದ ಜೀವನ ನಡೆಸಿ ಹಿಂದುತ್ವ ಮತ್ತು ಸನಾತನ ಧರ್ಮವನ್ನು ಉಳಿಸಿದ ಕೀರ್ತಿ ಮರಾಠ ಸಮಾಜಕ್ಕೆ ಸಲ್ಲುತ್ತದೆ. ನೀವು ಕೊಟ್ಟ ಮಾತನ್ನು ತಪ್ಪುವುದಿಲ್ಲ. ಈ ಸಮಾಜದ ಜತೆ ಸದಾ ಇರುತ್ತೇನೆ ಎಂದು ಹೇಳಿದರು.

ಮಾಜಿ ಸಚಿವ ಹೆಚ್. ಆಂಜನೇಯ ಮಾತನಾಡಿ, ಇಂದು ಉದ್ಘಾಟನೆಯಾಗಿರುವ ಶ್ರೀ ಭವಾನಿ ಕಲ್ಯಾಣ ಮಂಟಪ ಬಡ ಮತ್ತು ಮಧ್ಯಮ ವರ್ಗದವರ ಕಲ್ಯಾಣ ಕಾರ್ಯಕ್ರಮಗಳಿಗೆ ಕಡಿಮೆ ದರದಲ್ಲಿ ಸಿಗಲಿ ಎಂದು ಮನವಿ ಮಾಡಿದರು.

ದೇಶಕ್ಕೆ ಶ್ರಮಜೀವಿಗಳಾಗಿರುವ ಮರಾಠರ ಕೊಡುಗೆ ಅಪಾರವಾಗಿದೆ. ಅಂಬೇಡ್ಕರ್ ಅವರಿಗೆ ಅಸಹಾಯ ಮಾಡಿದ ಹಾಗೂ ದುರ್ಬಲರು, ಅಸಾಯಕರು ಮತ್ತು ಅವಕಾಶ ವಂಚಿತರಿಗೆ ಮೀಸಲಾತಿ ಕಲ್ಪಿಸಿದ ಶಾಹು ಮಹಾರಾಜರನ್ನು ಮರೆಯಲು ಸಾಧ್ಯವೇ ಇಲ್ಲ ಎಂದರು.

ಬೆಂಗಳೂರಿನ ಗೋಸಾಯಿ ಮಠದ ಶ್ರೀ ಮಂಜುನಾಥ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಕ್ಷತ್ರಿಯ ಮರಾಠ ವಿದ್ಯಾವರ್ಧಕ ಸಂಘದ ಗೌರವಾಧ್ಯಕ್ಷ ಯಶವಂತರಾವ್ ಜಾಧವ್ ಪ್ರಾಸ್ತಾವಿಕ ಮಾತನಾಡಿದರು.

ಈ ವೇಳೆ ಸಂಘದ ಅಧ್ಯಕ್ಷ ಮಾಲತೇಶರಾವ್ ಜಾಧವ್, ವಿಧಾನ ಪರಿಷತ್ ಸದಸ್ಯ ಎಂ.ಜಿ. ಮೂಳೆ, ನಿಗಮ ಮಂಡಳಿ ವ್ಯವಸ್ಥಾಕ ನಿರ್ದೇಶಕ ಡಾ.ಪ್ರಕಾಶ್ ಪಾಗೋಜಿ, ಖಜಾಂಚಿ ಎಂ. ಗೋಪಾಲ್‌ರಾವ್ ಮಾನೆ, ಕೆಪಿಸಿಸಿ ಕಾರ್ಯದರ್ಶಿ ಡಿ. ಬಸವರಾಜ್, ಕಾಂಗ್ರೆಸ್ ಮುಖಂಡ ಎಂ.ಟಿ. ಸುಭಾಷ್ ಇತರರಿದ್ದರು.

# ಅಟಲ್ ಜೀ ಜನ್ಮ ಶತಾಬ್ದಿ ದಿನ ಮಾಜಿ ಸಂಸದ ಸಿದ್ದೇಶ್ವರಗೆ ಗೌರವ



ದಾವಣಗೆರೆ, ಫೆ. 21 - ಅಟಲ್ ಜೀ ಜನ್ಮ ಶತಾಬ್ದಿ ವರ್ಷಾಚರಣೆಯ ಹಿನ್ನೆಲೆಯಲ್ಲಿ ಮಾಜಿ ಕೇಂದ್ರ ಸಚಿವ ಜಿ.ಎಂ. ಸಿದ್ದೇಶ್ವರ ಅವರ ನಿವಾಸದಲ್ಲಿ ಭೇಟಿಯಾಗಿ ಗೌರವ ಸಮರ್ಪಣೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಅಟಲ್ ಜೀ ಜನ್ಮ ಶತಮಾನೋತ್ಸವ ರಾಜ್ಯ ತಂಡದ ಪ್ರಮುಖರಾದ ವಿಧಾನ ಪರಿಷತ್ ಮಾಜಿ ಮುಖ್ಯ ಸಚೇತಕ ಡಾ. ಎ.ಎಚ್. ಶಿವಯೋಗಿ ಸ್ವಾಮಿ, ಜಿಲ್ಲಾ ಬಿಜೆಪಿ ಅಧ್ಯಕ್ಷ ರಾಜಶೇಖರ ನಾಗಪ್ಪ, ಜಿಲ್ಲಾ ಸಮಿತಿಯ ಪ್ರಮುಖರಾದ ಎಲ್.ಎನ್. ಕಲ್ಲೇಶ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಐರಣಿ ಅಣ್ಣೇಶ್, ಜಿಲ್ಲಾ ಮಾಧ್ಯಮ ಪ್ರಮುಖರಾದ, ತಂಡದ ಸದಸ್ಯರಾದ ಎಚ್. ಪಿ. ವಿಶ್ವಾಸ್, ಜಿಲ್ಲಾ ಸಾಮಾಜಿಕ ಜಾಲತಾಣದ ಸಂಚಾಲಕರು, ಜಿಲ್ಲಾ ತಂಡದ ಸದಸ್ಯ ಕೊಟ್ರೇಶ ಗೌಡ ಉಪಸ್ಥಿತರಿದ್ದರು.

# ವಿಶ್ವ ಕರ್ನಾಟಕ ರಕ್ಷಣಾ ವೇದಿಕೆಗೆ ಜಿಲ್ಲಾ ಸಮಿತಿ ಪದಾಧಿಕಾರಿಗಳ ಆಯ್ಕೆ



ದಾವಣಗೆರೆ, ಫೆ. 21 - ವಿಶ್ವ ಕರ್ನಾಟಕ ರಕ್ಷಣಾ ವೇದಿಕೆಯ, ದಾವಣಗೆರೆ ಜಿಲ್ಲಾ ಘಟಕದ ವತಿಯಿಂದ ನಗರದ ಪ್ರವಾಸಿ ಮಂದಿರದಲ್ಲಿ ಜಿಲ್ಲಾ ಅಧ್ಯಕ್ಷ ಬಾಬುರಾವ್ ಅಧ್ಯಕ್ಷತೆಯಲ್ಲಿ ನೂತನ ಜಿಲ್ಲಾ ಸಮಿತಿಯನ್ನು ರಚಿಸಲಾಯಿತು.

ಸಮಿತಿಯ ಗೌರವ ಅಧ್ಯಕ್ಷರಾಗಿ ಬೇತೂರು ಹನುಮಂತಪ್ಪ, ಅಧ್ಯಕ್ಷರಾಗಿ ಬಾಬುರಾವ್, ಉಪಾಧ್ಯಕ್ಷರುಗಳಾಗಿ ಜಿ.ಮಹಾಲಿಂಗಪ್ಪ, ಬಿ.ವಿ. ಮಂಜುನಾಥ್, ಫಾರೂಕ್ ಹಟೇಲಿ, ಸಂಚಾಲಕರುಗಳಾಗಿ ಗಿರೀಶ್ ನವಲೆ, ಎಂ.ರಮೇಶ್, ರಂಗನಾಥ್, ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾಗಿ ಆಜಮ್ ರಜ್ವಿ, ಕಾರ್ಯದರ್ಶಿಯಾಗಿ ಮಂಜುನಾಥ್ ಶೆಟ್ಟಿ, ಸಹ ಕಾರ್ಯದರ್ಶಿಯಾಗಿ ಆಜಮ್ ಅಲೀ, ಸಂಘಟನಾ ಕಾರ್ಯದರ್ಶಿಗಳಾಗಿ ಸೈಯದ್ ಶಾಬಾಜ್, ಗದಿಗೆಪ್ಪ ವಾಸನ, ಇಮ್ರಾನ್, ಅಶ್ವತ್ಥ್ ನಾರಾಯಣ, ಖಜಾಂಚಿಯಾಗಿ ಶಾರೂಕ್ ಷಾ, ಸದಸ್ಯರಾಗಿ ರಾಜೀಕ್, ಮೊಹಮ್ಮದ್ ಸಲೀಮ್, ಆನಂದ್. ಮಂಜುನಾಥ್, ಖಲಂದರ್ ಅವರುಗಳನ್ನು ಅಯ್ಕೆ ಮಾಡಲಾಯಿತು.

# ರಾಜ್ಯದಲ್ಲಿ ರಂಜಾನ್ ಬಿಡುವಿನ ಪ್ರಸ್ತಾಪ ಇಲ್ಲ

**(1ನೇ ಪುಟದಿಂದ)** ಹಾಗೂ ಎ.ಆರ್.ಎಂ. ಹುಸೇನ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದ್ದರು. ಈ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿರುವ ಪರಮೇಶ್ವರ್, ಅವರು ಪತ್ರ ಬರೆದಿರಬಹುದು. ಆದರೆ ಸರ್ಕಾರದ ಎದುರು ಯಾವುದೇ ಪ್ರಸ್ತಾವನೆ ಇಲ್ಲ. ಈ ಬಗ್ಗೆ ಸಂಪುಟದಲ್ಲೇ ಆಗಲಿ ಬೇರೆಲ್ಲೇ ಆಗಲಿ ಚರ್ಚೆ ನಡೆದಿಲ್ಲ ಎಂದು ತಿಳಿಸಿದ್ದಾರೆ.

ಆಂಧ್ರಪ್ರದೇಶ ಹಾಗೂ ತೆಲಂಗಾಣಗಳಲ್ಲಿ ರಂಜಾನ್ ಅವಧಿಯಲ್ಲಿ ಮುಸ್ಲಿಂ ಉದ್ಯೋಗಿಗಳು ಒಂದು ಗಂಟೆ ಮುಂಚೆ ಮನೆಗೆ ತೆರಳಲು ಅನುಮತಿ ನೀಡಲಾಗಿತ್ತು.

# ಮಾರಕವಾಗುವ ಹೇಳಿಕೆ ನಿಲ್ಲಿಸಿ

**(1ನೇ ಪುಟದಿಂದ)** ಬದಲಾವಣೆಗೆ ಸಂಬಂಧಿಸಿದಂತೆ ಈ ಸಚಿವರ ಪಡೆ ಬಹಿರಂಗವಾಗೇ ಅಪಸ್ವರ ಎತ್ತಿದ್ದು ಕಂಡು ಬಂದಿತ್ತು.

ಅಷ್ಟೇ ಅಲ್ಲ, ಸಿದ್ದರಾಮಯ್ಯ ಅವರೇ ಪೂರ್ಣಾವಧಿಗೆ ಮುಖ್ಯಮಂತ್ರಿ ಆಗಿರಬೇಕು ಎಂಬ ಹೇಳಿಕೆ ನೀಡಿದ್ದಲ್ಲದೆ, ವರಿಷ್ಠರ ಮನವೊಲಿಸಲು ಈ ಸಚಿವರು ಒಬ್ಬರ ನಂತರ ಒಬ್ಬರು ದೆಹಲಿ ಯಾತ್ರೆಯನ್ನೂ ಮಾಡಿದರು. ಕಳೆದ ಮೂರು ದಿನಗಳಿಂದ ದೆಹಲಿಯಲ್ಲೇ ಬಿಡಾರ ಹೂಡಿದ್ದ ಡಾ.ಪರಮೇಶ್ವರ್, ವರಿಷ್ಠರನ್ನು ಭೇಟಿ ಮಾಡಿದ ಸಂದರ್ಭದಲ್ಲಿ ಖರ್ಗೆ ಮತ್ತು ವೇಣುಗೋಪಾಲ್ ಈ ಸಂದೇಶ ರವಾನೆ ಮಾಡಿದರು ಎನ್ನಲಾಗಿದೆ.

ನಗರಕ್ಕೆ ಹಿಂತಿರುಗುತ್ತಿದ್ದಂತೆ ಡಾ.ಪರಮೇಶ್ವರ್ ಹಾಗೂ ರಾಜಣ್ಣ, ಮುಖ್ಯಮಂತ್ರಿ ಅವರನ್ನು ಕಾವೇರಿ ನಿವಾಸದಲ್ಲಿ ಭೇಟಿ ಮಾಡಿ ಗೌಪ್ಯ ಮಾತುಕತೆ ನಡೆಸಿದರು. ಮುಖ್ಯಮಂತ್ರಿ ಭೇಟಿ ಮಾಡಿ ಹೊರಬಂದ ನಂತರ ಮಾಧ್ಯಮದವರ ಬಳಿ ಪಕ್ಷದ ಆಂತರಿಕ ವಿಚಾರ ಕುರಿತು ಯಾವುದೇ ಹೇಳಿಕೆ ನೀಡಲು ಇವರುಗಳು ನಿರಾಕರಿಸಿದರು.

ಸದಾ ವಿವಾದದಲ್ಲೇ ಇರುವ ರಾಜಣ್ಣ ಹಾಗೂ ಸತೀಶ್ ಜಾರಕಿಹೊಳಿ ಕೂಡಾ ಇಂದು ಮಾಧ್ಯಮದವರ ಮುಂದೆ ಬಾಯಿ ಬಿಡಲೇ ಇಲ್ಲ. ಮುಖ್ಯಮಂತ್ರಿ ಅವರನ್ನು ಭೇಟಿ ಮಾಡಿದ ಸಚಿವರುಗಳು, ವರಿಷ್ಠರು ನೀಡಿದ ಎಚ್ಚರಿಕೆ ಮತ್ತು ಸಂದೇಶದ ಬಗ್ಗೆಯೇ ಬಹುತೇಕ ಚರ್ಚೆ ಮಾಡಿದ್ದಾರೆನ್ನಲಾಗಿದೆ.

# ಕುಂಭಮೇಳಕ್ಕೆ ತೆರಳಿದ್ದ ಬೀದರ್‌ನ ಐವರು ರಸ್ತೆ ಅಪಘಾತದಲ್ಲಿ ಸಾವು



ಬೀದರ್, ಫೆ.21- ಉತ್ತರ ಪ್ರದೇಶದ ವಾರಾಣಾಸಿ ಸಮೀಪ ಶುಕ್ರವಾರ ಬೆಳಗಿನ ಜಾವ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಬೀದರ್ ನ ಐದು ಜನ ಮೃತಪಟ್ಟಿದ್ದಾರೆ. ಏಳು ಜನ ಗಂಭೀರವಾಗಿ ಗಾಯಗೊಂಡಿದ್ದಾರೆ.

ನಗರದ ಲಾಡಗೇರಿ ನಿವಾಸಿಗಳಾದ ಲಕ್ಷ್ಮಿ (57), ನೀಲಮ್ಮ (62), ಸಂತೋಷಕುಮಾರ (45), ಸುನೀತಾ (40), ಕಲಾವತಿ (40) ಮೃತಪಟ್ಟವರು.

ಸುಲೋಚನಾ, ಸುಜಾತ, ಕವಿತಾ, ಅನಿತಾ, ಖುಷಿ, ಗಣೇಶ, ಸಾಯಿ, ಭಗವಂತ ಹಾಗೂ ಶಿವಾ ಗಾಯಗೊಂಡವರು.

ವಾರಣಾಸಿಯ ರೂಪಾಪುರ ಬಳಿ ಶುಕ್ರವಾರ ಬೆಳಗಿನ ಜಾವ ಹೆದ್ದಾರಿ ಬದಿಯಲ್ಲಿ ನಿಂತಿದ್ದ ಲಾರಿಗೆ ಕುಂಭಮೇಳದ ಭಕ್ತರಿದ್ದ ಕ್ರೂಸರ್ ಡಿಕ್ಕಿ ಹೊಡೆದಿದ್ದು, ವಾಹನ ನಜ್ಜುಗುಜ್ಜಾಗಿದೆ. ಸ್ಥಳದಲ್ಲೇ ಐವರು ಮೃತಪಟ್ಟಿದ್ದಾರೆ. ಫೆ. 18ರಂದು ಬೀದರ್ ನಿಂದ ಪ್ರಯಾಗರಾಜ್ ಗೆ ತೆರಳಿದ್ದರು. ಕುಂಭಮೇಳದ ಪುಣ್ಯಸ್ನಾನ ಮಾಡಿ, ವಾರಣಾಸಿಗೆ ಭೇಟಿ ಕೊಟ್ಟು ಹಿಂತಿರುಗುವಾಗ ಈ ಘಟನೆ ನಡೆದಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ್ ಗುಂಟಿ ತಿಳಿಸಿದ್ದಾರೆ.

# ಮಳಿಗೆ ಮುಟ್ಟುಗೋಲು : ಜಿಲ್ಲಾಧಿಕಾರಿ

**(1ನೇ ಪುಟದಿಂದ)** ಅವರು ಸಂಚಾರಿ ಸಮಸ್ಯೆ ಹಾಗೂ ಟ್ರಕ್ ಟರ್ಮಿನಲ್ ಕುರಿತು ಪ್ರಸ್ತಾಪಿಸಿದರು. ಸಭೆಯಲ್ಲಿ ಹೆಚ್ಚುವರಿ ಎಸ್ಪಿ ವಿಜಯ್ ಕುಮಾರ್ ಸಂತೋಷ್, ಮಂಜುನಾಥ್ ಇತರರು ಉಪಸ್ಥಿತರಿದ್ದರು.

# ಅಸ್ಸಾಂ : ನಮಾಜ್ ಬಿಡುವಿಗೆ ತೆರೆ

**(1ನೇ ಪುಟದಿಂದ)** ಮುಖ್ಯಮಂತ್ರಿ ಹೇಮಂತ ಬಿಸ್ವ ಶರ್ಮ ಮಾತನಾಡಿ, 1937ರಲ್ಲಿ ಸೈಯದ್ ಸಾದುಲ್ಲ ಅವರ ಮುಸ್ಲಿಂ ಲೀಗ್ ಶುಕ್ರವಾರದ ಬಿಡುವಿನ ಪದ್ದತಿ ಜಾರಿಗೆ ತಂದಿತ್ತು. ಈಗ ನಾವು ವಸಾಹತು ಶಾಹಿ ಕಾಲದ ಪದ್ಧತಿಯಿಂದ ಹೊರ ಬಂದಿದ್ದೇವೆ ಎಂದಿದ್ದಾರೆ.

# ಫೈನಾನ್ಸ್ : ನಿಯಮಬದ್ಧವಾಗಿ ವ್ಯವಹರಿಸಿ

**(1ನೇ ಪುಟದಿಂದ)** ಪೊಲೀಸ್ ಉಪ ಅಧೀಕ್ಷಕರ ಮೂಲಕ ಸುಮೋಟೋ ಪ್ರಕರಣ ದಾಖಲಿಸುವ ಅಧಿಕಾರ ಕಾಯಿದೆಯಲ್ಲಿದೆ. ತಪ್ಪಿತಸ್ಥರೆಂದು ಕಂಡುಬಂದಲ್ಲಿ 10 ವರ್ಷಗಳವರೆಗೆ ಜೈಲು ಶಿಕ್ಷೆ ಹಾಗೂ ದಂಡವಿರುತ್ತದೆ. ಒಂದು ವೇಳೆ ಸಾಲ ವಸೂಲಾತಿಯಾಗುತ್ತಿಲ್ಲವೆಂದರೆ ಅದನ್ನು ಸಂಸ್ಥೆಯ ಕಾನೂನು ಚೌಕಟ್ಟಿನಲ್ಲಿ ವಸೂಲಾತಿಗೆ ಕ್ರಮ ವಹಿಸಬೇಕು, ಮಾನಸಿಕ, ದೈಹಿಕ ಹಿಂಸೆಗೆ ಅವಕಾಶವಿಲ್ಲ ಎಂದರು.

ಜಿಲ್ಲಾ ಪೊಲೀಸ್ ಅಧೀಕ್ಷಕಿ ಉಮಾ ಪ್ರಶಾಂತ್ ಮಾತನಾಡಿ, ಸುಗ್ರೀವಾಜ್ಞೆಯಲ್ಲಿ ಬಹಳ ಕಟ್ಟುನಿಟ್ಟಿನ ನಿಯಮಗಳನ್ನು ಜಾರಿಗೆ ತರಲಾಗಿದೆ. ನಿಯಮ ಮೀರಿ ವಸೂಲಾತಿ ಕ್ರಮ ಕೈಗೊಳ್ಳುವಂತಿಲ್ಲ, ಹೊಸ ಕಾನೂನಿನ ಅವಕಾಶಗಳನ್ನು ದುರ್ಬಳಕೆ ಮಾಡಿಕೊಂಡಲ್ಲಿ ಫೈನಾನ್ಸ್ ಸಂಸ್ಥೆಯವರು ಸಹ ಹತ್ತಿರದ ಠಾಣೆಗೆ ಮಾಹಿತಿ ನೀಡಬಹುದಾಗಿದೆ ಎಂದರು.

ಮನೆಗೆ ಹೋಗಿ ಸಾಲಗಾರರ ಬೈಕ್ ಹಸು-ಕರು ಸೇರಿದಂತೆ ಇತರ ವಸ್ತುಗಳನ್ನು ಎತ್ತಿಕೊಂಡು ಬರಬಾರದು. ಸಾಲ ಪಡೆದವರೊಂದಿಗೆ ಅಶ್ಲೀಲವಾಗಿ ಮಾತನಾಡಬಾರದು. ಭಾವಚಿತ್ರ ದುರ್ಬಳಕೆ ಮಾಡಬಾರದು. ಗುಂಪು ಸಾಲ ನೀಡುವುದಕ್ಕೆ ಸಂಬಂಧಿಸಿದಂತೆ ನಿಯಮಾನುಸಾರ ಕ್ರಮ ವಹಿಸಬೇಕು ಎಂದು ಎಚ್ಚರಿಕೆ ನೀಡಿದರು.

ಸಭೆಯಲ್ಲಿ ಸಹಕಾರ ಸಂಘಗಳ ಉಪನಿಬಂಧಕರಾದ ಮಧು ಶ್ರೀನಿವಾಸ್ ಲೇವಾದೇವಿ, ಗಿರವಿದಾರರ ಮತ್ತು ಚಿಟ್ಸ್ ಫಂಡ್‌ಗಳ ವ್ಯವಹಾರದ ಬಗ್ಗೆ ಮತ್ತು ನಿಯಮಗಳ ಬಗ್ಗೆ ಮಾತನಾಡಿದರು.

ಸಭೆಯಲ್ಲಿ ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ವಿಜಯಕುಮಾರ್ ಎಂ.ಸಂತೋಷ್, ಮಂಜುನಾಥ್ ಹಾಗೂ ಫೈನಾನ್ಸ್ ಸಂಸ್ಥೆಯವರು ಉಪಸ್ಥಿತರಿದ್ದರು.


**ಸೈಟುಗಳು ಮಾರಾಟಕ್ಕಿವೆ**
ವಿವೇಕಾನಂದ ಬಡಾವಣೆಯಲ್ಲಿ 40x60 West ಕೃಷಿ ಕೇಂದ್ರ ಹಿಂಭಾಗ 30x54 North 40 ಅಡಿ ರೋಡಿಗಿದೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಕಮರ್ಷಿಯಲ್ ಸೈಟುಗಳು ಮಾರಾಟಕ್ಕಿವೆ**
ಸಾಯಿ ಇಂಟರ್ ನ್ಯಾಷನಲ್ ಹೋಟೆಲ್ ಹತ್ತಿರ 180x110 East 40 ಅಡಿ ರೋಡಿಗಿದೆ. ಪಿ.ಬಿ. ರೋಡಿಗೆ ಹತ್ತಿರ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೊಳ್ಳೆ ಮೆಶ್ ಹಾಕಲಾಗುವುದು**
ನಮ್ಮಲ್ಲಿ ಎಲ್ಲಾ ತರಹದ ಸೋಫಾ, ಕುಶನ್, ಕಿಟಕಿಗೆ ಫೈಬರ್ ವೆಲ್ಕ್ರೊ ಮೆಶ್ & ಅಲ್ಯುಮಿನಿಯಂ ಫ್ರೇಮ್ stainless steel ಸೊಳ್ಳೆಮೆಶ್ ಹಾಕಲಾಗುವುದು.
Swapna cushion work
ಮಹಾರಾಜ ಪೇಟೆ ದಾವಣಗೆರೆ.
98445- 81966

**ಮನೆಗಳು ಮಾರಾಟಕ್ಕಿವೆ**
ಭಗೀರಥ ಸರ್ಕಲ್, ನಿಟ್ಟುವಳ್ಳಿ, ದಾವಣಗೆರೆ ಹತ್ತಿರ ಇರುವ 20x30 ಸೈಜಿನ ಮನೆಗಳು ಮಾರಾಟಕ್ಕಿವೆ. ಸಂಪರ್ಕಿಸಿ :
94484 39639

**ಬಾಡಿಗೆಗೆ**
Old PB Road, Trends Man, Titan World Bldg, Covered Terrace - 3600 Sqft Basement-30x15 Godowns
ಪಿ.ಜೆ. ಬಡಾವಣೆ, 8ನೇ ಮೇನ್, 8ನೇ ಕ್ರಾಸ್, ಮೊದಲನೇ ಮಹಡಿ 3500 ಅಡಿಗಳು
94480 28103

**ಬೇಕಾಗಿದ್ದಾರೆ**
ನಮ್ಮ ಕೌಂಟರ್‌ಗಳಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ. ಪುರುಷರು ಮಾತ್ರ. ತಮ್ಮ ವಿವರಗಳೊಂದಿಗೆ ಸಂಪರ್ಕಿಸಿ :
ANS ಫುಡ್ಸ್
ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಎದುರು, ಮಂಡಿಪೇಟೆ, ದಾವಣಗೆರೆ-1.
86604 12149

**ಮಾರಾಟಕ್ಕಿದೆ**
ಬನಶಂಕರಿ ಬಡಾವಣೆ, ಶಿವ ಪಾರ್ವತಿ, ಡಾಲರ್ಸ್ ಕಾಲೋನಿ, ಕುಂದುವಾಡ, ಹೂಡಿಕೆ ಸೈಟುಗಳು ಮತ್ತು ಯರಗುಂಟೆಯಲ್ಲಿ ಹೂಡಿಕೆ ಸೈಟುಗಳು 30x40, 30x50, 40x60 ಎಲ್ಲಾ ಫ್ಲಾಟುಗಳು ದಾವಣಗೆರೆಯಲ್ಲಿವೆ.
097315 12365

**ಕಮರ್ಷಿಯಲ್ ಸೈಟುಗಳು ಮಾರಾಟಕ್ಕಿವೆ**
ವಿದ್ಯಾನಗರ ಮೇನ್ ರೋಡಿಗೆ 29x28 East-South Corner, ಭಗೀರಥ ಸರ್ಕಲ್ ಹತ್ತಿರ 25x40 South
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಮಾರಾಟಕ್ಕಿವೆ**
ಶಿರಾ ಹತ್ತಿರದ ಮದ್ದನಾಯಕನಹಳ್ಳಿ 6x2, 6x3, 6x4 ಅಳತೆಯ ಕಲ್ಲುಗಳು ಮಾರಾಟಕ್ಕಿವೆ
94480 28103
(4 PM to 8 PM)

**ಕೆಲಸಕ್ಕೆ ಬೇಕಾಗಿದ್ದಾರೆ**
ಪಾಟೀಲ್ ಏಜೆನ್ಸೀಸ್
ಸೇಲ್ಸ್ ಮ್ಯಾನ್ & ಡೆಲಿವರಿ ಬಾಯ್ ಆರ್ಡರ್ ಮತ್ತು ಡೆಲಿವರಿ ಮಾಡಲು ಹುಡುಗರು ಬೇಕಾಗಿದ್ದಾರೆ.
90606 60949, 98803 28444

**ಜಮೀನುಗಳು ಮತ್ತು ಸೈಟುಗಳು ಮಾರಾಟಕ್ಕಿವೆ**
ರಾಣೇಬೆನ್ನೂರು ದೇವರಗುಡ್ಡದ ಹತ್ತಿರ ಕೆಂಪು ಮಣ್ಣಿನ ನೆಲದ 4ನೇ ವರ್ಷದ 3 ಎಕರೆ ಅಡಿಕೆ ತೋಟ ಮಾರಾಟಕ್ಕಿದೆ. ಹಾಗೂ ಖಾಲಿ ಜಮೀನುಗಳು, ಸೈಟುಗಳು ಮಾರಾಟಕ್ಕಿವೆ.
ಶ್ರೀ ಚಾಮುಂಡೇಶ್ವರಿ ಎಂಟರ್ ಪ್ರೈಸಸ್
91085 54727

**ಸೈಟು ಮಾರಾಟಕ್ಕಿದೆ**
30x40 ಉತ್ತರ
ಲಲಿತಾ ಇಂಟರ್ ನ್ಯಾಷನಲ್ ಸ್ಕೂಲ್ ಹಿಂಭಾಗ
77600 70828

**ಮಹಡಿ ಮನೆ ಮಾರಾಟಕ್ಕಿದೆ**
ಹರಿಹರ ನಗರದ ಹರ್ಲಾಪುರ ಬಡಾವಣೆ, 1ನೇ ಮುಖ್ಯ ರಸ್ತೆ, 2ನೇ ಕ್ರಾಸ್‌ನಲ್ಲಿ 20x60 ಅಳತೆಯ ಆರ್‌ಸಿಸಿ ಕಟ್ಟಡದ ಮಹಡಿ ಮನೆ ಮಾರಾಟಕ್ಕಿದೆ. ಸಂಪರ್ಕಿಸಿ :
89704 95290, 99862 04090

**ಬೇಕಾಗಿದ್ದಾರೆ**
ಸಮ್ಮರ್ ಕ್ಯಾಂಪ್‌ನಲ್ಲಿ ಪಠ್ಯೇತರ ಚಟುವಟಿಕೆಗಳಿಗೆ ಶಿಕ್ಷಕರು ಬೇಕಾಗಿದ್ದಾರೆ.
77600 70828

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಮಹಿಳಾ ಮತ್ತು ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಪುರುಷ ಅಭ್ಯರ್ಥಿಗಳಿಗೆ ಊಟ ಮತ್ತು ವಸತಿ ಸೌಲಭ್ಯವಿದೆ. ಸಂಪರ್ಕಿಸಿ :
98442 94446

**ಮನೆ ಲೀಸ್‌ಗೆ ಇದೆ**
2ನೇ ಮಹಡಿಯಲ್ಲಿ ಸಿಂಗಲ್ ಬೆಡ್ ರೂಂ ಮನೆ ಲೀಸಿಗಿದೆ.
ಆಂಜನೇಯ ಬಡಾವಣೆ, 10ನೇ ಕ್ರಾಸ್, ಸರ್ಕಾರಿ ಮಹಿಳಾ ಕಾಲೇಜ್ ಹತ್ತಿರ, MES ಕಾನ್ವೆಂಟ್ ಹತ್ತಿರ, ದಾವಣಗೆರೆ.
96201 63505

**ನ್ಯೂ ಮೂನ್‌ಲೈಟ್ ಫ್ಯಾಮಿಲಿ ಗಾರ್ಡನ್ ರೆಸ್ಟೋರೆಂಟ್**
ನಮ್ಮಲ್ಲಿ ಎಲ್ಲಾ ತರಹದ ಶುಭ ಸಮಾರಂಭಗಳಿಗೆ ಅಡುಗೆ ಮಾಡಿಕೊಡಲಾಗುವುದು. ಸಂಪರ್ಕಿಸಿ :
95909 30395, 93793 33143

**ಕೆಲಸಕ್ಕೆ ಬೇಕಾಗಿದ್ದಾರೆ**
ಗೋಡೌನಿನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ :
94817 74321

**ಕೆಲಸಕ್ಕೆ ಬೇಕಾಗಿದ್ದಾರೆ**
ಶ್ರೀ ಸಾಯಿ ಎಗ್ ಸೆಂಟರ್‌ನಲ್ಲಿ ಆಟೋ ಡ್ರೈವರ್, ಟಾಟಾ ACE ಡ್ರೈವರ್ ಮತ್ತು ಅಂಗಡಿಯ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಉತ್ತೀರ್ಣ
ಶಿವಪ್ಪ ಸರ್ಕಲ್, ದಾವಣಗೆರೆ.
96860 22969

**ಬೇಕಾಗಿದ್ದಾರೆ**
ಪೈಪ್ ಡಿಸ್ಟ್ರಿಬ್ಯೂಷನ್ ಆಫೀಸ್ ನಲ್ಲಿ ಅಕೌಂಟೆಂಟ್ ಕೆಲಸಕ್ಕೆ Tally ಬಲ್ಲ ಮಹಿಳೆ ಹಾಗೂ ಕೆಲಸ ಮಾಡಲು ಉತ್ಸಾಹಿ ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ :
97436 36000, 81976 96774

**ಆಂಗ್ಲ ಮಾಧ್ಯಮ ಶಾಲೆ ಮಾರಾಟಕ್ಕಿದೆ**
ಸ್ಥಳ : ದಾವಣಗೆರೆ.
ಆಸಕ್ತರು ಸಂಪರ್ಕಿಸಿ :
94493 20663

**ಬೇಕಾಗಿದ್ದಾರೆ**
ಕಾರ್ ವಾಟರ್ ವಾಶ್ ಸರ್ವೀಸ್ ಸ್ಟೇಷನ್‌ನಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಆಸಕ್ತರು ಸಂಪರ್ಕಿಸಿ : **ಕಾರ್ ಹೆಲ್ತ್ ವಾಟರ್ ಸರ್ವೀಸ್ ಸ್ಟೇಷನ್**, ಮಾಗನೂರು ಬಸಪ್ಪ ಪೆಟ್ರೋಲ್ ಬಂಕ್ ಹಿಂಭಾಗ, ಹದಡಿ ರಸ್ತೆ, ದಾವಣಗೆರೆ.
99009 30270, 81057 00885

**FOR RENT**
Independent duplex house with four bed rooms attached bath & house with 2 bed rooms having all facilities 2nd floor at MCC B Block, 3rd main, 6th cross behind gundi School.
M : 99008 33644

**2 BHK HOME FOR RENT**
Available one independent 2 Bhk Home For Rent at ground floor for a decent family located near Punjab National Bank on PB Road. The home is easily accessible to Old/ New bus stand, Railway Station, Realiance Market. Contact :
91080 29438

**ಟ್ಯಾಂಕರ್ ಲಾರಿ ಡ್ರೈವರ್ ಬೇಕಾಗಿದ್ದಾರೆ**
ಆನಗೋಡು ಸಮೀಪ NH-48ನಲ್ಲಿ ಇರುವ BPCL ಪೆಟ್ರೋಲ್ ಬಂಕ್‌ನ 20KL ಟ್ಯಾಂಕರ್ ಲಾರಿಗೆ HAZARD ಇರುವ ಟ್ಯಾಂಕರ್ ಲಾರಿ ಚಾಲಕರು ಬೇಕಾಗಿದ್ದಾರೆ. ಸೂಕ್ತ ದಾಖಲೆಗಳೊಂದಿಗೆ ಸಂಪರ್ಕಿಸಿ :
90082 28222
99001 42052

**ಸೈಟುಗಳು ಮಾರಾಟಕ್ಕಿವೆ**
ಯರಗುಂಟೆಯ ಹೊಸ ಲೇಔಟ್‌ನಲ್ಲಿ 30x40 ಮತ್ತು 30x45 ಸೈಜ್ ಸೈಟುಗಳು ಮಾರಾಟಕ್ಕಿವೆ.
92414 62457

**ಸೈಟ್ ಮಾರಾಟಕ್ಕಿದೆ**
ದಾವಣಗೆರೆಯ ಜೆ.ಹೆಚ್. ಪಟೇಲ್ ನಗರ, ಸ್ಟೇಡಿಯಂ ಹತ್ತಿರ, 5ನೇ ಮೇನ್, 3ನೇ ಕ್ರಾಸ್, 'ಇ' ಬ್ಲಾಕ್‌ನಲ್ಲಿ ಪಶ್ಚಿಮಾಭಿಮುಖ, 40x55 ಅಳತೆಯ ಖಾಲಿ ಸೈಟ್ ಮಾರಾಟಕ್ಕಿದೆ. ನಿವೇಶನ ಸಂಖ್ಯೆ 837/1
97434 30963

**ಮಳಿಗೆ ಬಾಡಿಗೆಗೆ**
ಹದಡಿ ರಸ್ತೆ, ಆರೈಕೆ ಆಸ್ಪತ್ರೆ ಎದುರು, ದಾವಣಗೆರೆ. ಗ್ರೌಂಡ್ ಫ್ಲೋರ್‌ನ ಮಳಿಗೆ ಬಾಡಿಗೆಗೆ ದೊರೆಯುತ್ತದೆ.
97424 57556

**ಹೊಸ ಲೇಔಟ್ ಸೈಟ್‌ಗಳು**
1950 Rs. Sqft ರಿಂದ 2500 ರ ವರೆಗೂ ದೊಡ್ಡ ಬಾತಿ ಹತ್ತಿರ ಮಧ್ಯವರ್ತಿಗಳಿಗೆ ಅವಕಾಶವಿಲ್ಲ
81235 29544

**ಮನೆ ಮಾರಾಟಕ್ಕಿದೆ**
30x40 ಅಳತೆಯ ಗ್ರೌಂಡ್ ಫ್ಲೋರ್ 2 BHK, 1ನೇ ಮಹಡಿ 2 BHK, 2ನೇ ಮಹಡಿ ಸಿಂಗಲ್ ರೂಂ ಅಟ್ಯಾಚ್ ಬಾತ್ ರೂಂ ಮನೆ ಮಾರಾಟಕ್ಕಿದೆ. #1982/2, 6ನೇ ಕ್ರಾಸ್, ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
9480693506, 9449851177

**AdBlue / DEF**
available with Best Quality & Price for All BS6 Diesel Commercial & Passanger Vehicles
Visit: Best Lubricants
Opp. to New Pvt Bus Stand PB Road, Davangere.
73380 33337

**CRASH COURSE FOR CLASS 10 CBSE / STATE**
* End of March to Mid of May, * 5 1/2 hrs. of effective teaching each day, * Maths & Science
Pi Academy, DVG-04
Sri S. Nijalingappa Layout.
99642 29344, 89513 67178
95911 27363

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು, ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಆ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ರಕ್ತ ದಾನ ಶ್ರೇಷ್ಠ ದಾನ**

**For Rent**
Industrial Building
Suitable for Gherkin, Food, Warehouse, etc.,
Place : Bathi
94484 43130
94813 28668

**ಬಿಟಿ ಗಲ್ಲಿಯಲ್ಲಿ ಮಳಿಗೆ ಬಾಡಿಗೆಗೆ ಇವೆ**
ಬ್ಯಾಡಗಿ ಪುಟ್ಟಪ್ಪ ಕಾಂಪ್ಲೆಕ್ಸ್‌ನಲ್ಲಿ 12x13 ಅಳತೆಯಲ್ಲಿ ಮಳಿಗೆಗಳು ಬಾಡಿಗೆಗೆ ಇವೆ. ಸಂಪರ್ಕಿಸಿ :
ಬಿ.ಪಿ. ವೀರಣ್ಣ 94482 48393
ಬಿ.ಪಿ. ಜಯರಾಜ್ 94492 24121

**ಸೈಟು ಮಾರಾಟಕ್ಕಿದೆ**
ಭೂಮಿಕಾ ನಗರದಲ್ಲಿ ದಕ್ಷಿಣಾಭಿಮುಖವಾಗಿರುವ ಮತ್ತು ಉದ್ಯಾನವನ ಎದುರಿಗೆ ಇರುವ 34 x73 ಸೈಟು ಮಾರಾಟಕ್ಕಿದೆ. ಸಂಪರ್ಕಿಸಿ
94485 89727

**TUITIONS**
CBSE / ICSE Boards
Class 8th, 9th, 10th
CRASH COURSES FOR
NEET / CET / IIT - JEE
PUC I / PUC II / PCMB
NEET Long Term / Supplementary Exams
97398 65711, 94822 44114

**ಉದ್ಯೋಗಾವಕಾಶ**
ಹೆಸರಾಂತ ಕಂಪನಿಯಾದ ಸಂಜೀವಿನಿ ಹೆಲ್ತ್‌ಕೇರ್‌ನಲ್ಲಿ (ಹೋಂ ನರ್ಸಿಂಗ್)
ವಯೋವೃದ್ದರನ್ನು ನೋಡಿಕೊಳ್ಳಲು ಯುವತಿಯರು, ಯುವಕರು ಹಾಗೂ ಮಹಿಳೆಯರು ಬೇಕಾಗಿದ್ದಾರೆ.
ಉಚಿತ ಊಟ, ವಸತಿ. ಸಂಬಳ 18,000 ರಿಂದ 25,000 ರೂ.ವರೆಗೆ
ವಿದ್ಯಾರ್ಹತೆ : 7th, 10th, PUC, ANM, GNM
76193 54274

**FLAT FOR LEASE**
3 BHK, Sqft :1888
AM Apartment
Nainika Prime Rose
Vidyanagar last city bus stop Davanagere.
89519 38228, 80502 22181

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**RENTAL**
Space Available, 1600 sqft, II floor, 3rd main, P.J. Extn, (Near Chethana Hotel) Suitable Stockist, Corporate Office, Show Room, Doctors lift provided
9880765683, 9742273362

**ತಕ್ಷಣ ಬೇಕಾಗಿದ್ದಾರೆ**
ದಾವಣಗೆರೆ ಬಾಪೂಜಿ ಆಸ್ಪತ್ರೆಯಲ್ಲಿ 8 ಗಂಟೆ ಹಾಗೂ ದಾವಣಗೆರೆಯ ಸುತ್ತ-ಮುತ್ತಲಿನಲ್ಲಿ 12 ಗಂಟೆ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ಸ್ ತಕ್ಷಣ ಬೇಕಾಗಿದ್ದಾರೆ. ಸಂಪರ್ಕಿಸಿ :
ಅಸೋಸಿಯೇಟೆಡ್ ಎಂಟರ್‌ಪ್ರೈಸಸ್
ಗಣೇಶ್ ಲೇಔಟ್, ದಾವಣಗೆರೆ. 90605 45500
97390 89022, 99169 29713


**ಶ್ರೀ ಸಾಯಿಬಾಬ ಬೋರ್‌ವೆಲ್**
ಮನೆ ಒಳಗಡೆ ಹಾಗೂ ಹೊರಗಡೆ ಸ್ಟ್ಯಾಂಡ್ ಬೋರ್ 300 ಅಡಿಯಿಂದ 450 ಅಡಿ ವರೆಗೂ ಕೊರೆಯಲಾಗುವುದು.
99640 78484
95906 15776

**SPOKEN ENGLISH**
just 120 hours can change your life
@VETA Experts in spoken English
9845040493, 9902860360

**ಮಹಿಳೆಯರು ಕೆಲಸಕ್ಕೆ ಬೇಕಾಗಿದ್ದಾರೆ**
SAI SRI INDUSTRIES
Near Sub Register Office, Behind MRF Tyres Showroom.
98862 55308, 96111 14244

**SMART CITY CABS DAVANAGERE**
Minimum 4 km Rs - 99/-
Above per km Rs - 25/-
waiting charges per hours Rs - 100/- and 24 service will be available.
08192 255555
94811 79933, 99868 18205

# ರೈಲ್ವೆ ಸಿಬ್ಬಂದಿಗಾಗಿ ವಿಪತ್ತು ನಿರ್ವಹಣಾ ಕಾರ್ಯಾಗಾರ



ದಾವಣಗೆರೆ, ಫೆ. 21- ನಗರದ ರೈಲ್ವೆ ನಿಲ್ದಾಣದಲ್ಲಿ ಮೈಸೂರು ವಿಭಾಗದ ರೈಲ್ವೆ ಸಿಬ್ಬಂದಿಗಾಗಿ ವಿಪತ್ತು ನಿರ್ವಹಣಾ ಕಾರ್ಯಾಗಾರ ಇಂದು ನಡೆಯಿತು.

ದಾವಣಗೆರೆ ಜಿಲ್ಲೆಯ ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿ ನಾಗೇಶ್ ಎಂ. ಎನ್. ಮತ್ತು ರಾಜ್ಯ ವಿಪತ್ತು ಪ್ರತಿಕ್ರಿಯೆ ಪಡೆ ತಂಡದ ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಮಹಾಲಿಂಗಪ್ಪ ಎಂ. ಲಂಗೋಟಿ ಅವರುಗಳು, ಬೆಂಕಿಯಿಂದ ಆಗುವ ಅನಾಹುತಗಳು, ಅಗ್ನಿ ಸುರಕ್ಷತೆ, ಮುನ್ನೆಚ್ಚರಿಕೆಗಳು ಮತ್ತು ಬೆಂಕಿ ನಿರ್ವಹಿಸುವಾಗ ತೆಗೆದುಕೊಳ್ಳ ಬೇಕಾದ ಕ್ರಮಗಳ ಕುರಿತು ತರಬೇತಿ ನೀಡಿದರು.

ಅಗ್ನಿಶಾಮಕ ರಕ್ಷಣಾ ಸಾಧನಗಳನ್ನು ಪ್ರದರ್ಶಿಸುವ ಮೂಲಕ ವಿಪತ್ತು ಸಂದರ್ಭಗಳಲ್ಲಿ ಹೇಗೆ ನಿರ್ವಹಣೆ ಮಾಡಲಾಗುತ್ತದೆ ಎಂದು ಹಾಗು ಮೂಲಭೂತ ಅಗ್ನಿಶಾಮಕ ಕವಾಯತ್ತುಗಳು, ರಕ್ಷಣಾ ಕಾರ್ಯಾಚರಣೆಗಳನ್ನು ಹೇಗೆ ಪ್ರಾಯೋಗಿಕವಾಗಿ ಮಾಡಬಹುದು ಎಂಬುದನ್ನು ಪ್ರದರ್ಶಿಸಿದರು. ಹಾಗೂ ಗರಿಷ್ಠ ಜೀವಗಳನ್ನು ಉಳಿಸುವಲ್ಲಿ ಸಾರ್ವಜನಿಕರು ತಮ್ಮ ಪಾತ್ರವನ್ನು ಹೇಗೆ ಮಾಡಬಹುದು ಎಂಬುದನ್ನು ಅವರು ವಿವರಿಸಿದರು.

ಮೈಸೂರು ರೈಲ್ವೆ ರಕ್ಷಣಾ ಪಡೆಯ ಹಿರಿಯ ವಿಭಾಗೀಯ ಭದ್ರತಾ ಆಯುಕ್ತ ಸ್ವಾಮ್ ಪ್ರಶಾಂತ್, ಮೈಸೂರು ವಿಭಾಗೀಯ ಸುರಕ್ಷತಾ ಅಧಿಕಾರಿ ಸಂದೀಪ್ ವರ್ಮಾ, ಶಿವಮೊಗ್ಗ - ದಾವಣಗೆರೆಯ ಪೋಸ್ಟ್ ಕಮಾಂಡರ್ ಬಿ.ಕೆ. ಪ್ರಕಾಶ್ ನೇತೃತ್ವದಲ್ಲಿ, ವಿವಿಧ ಇಲಾಖೆಗಳಿಂದ (ಕಾರ್ಯಾಚರಣೆ, ಎಂಜಿನಿಯರಿಂಗ್, ಟಿಆರ್‌ಡಿ, ವಿದ್ಯುತ್, ದೂರಸಂಪರ್ಕ, ಸುರಕ್ಷತೆ, ಜಿಆರ್‌ಪಿ, ವಾಣಿಜ್ಯ ಮತ್ತು ಆರ್‌ಪಿಎಫ್) ಸುಮಾರು 100 ರೈಲ್ವೆ ಸಿಬ್ಬಂದಿ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.

ಸ್ಥಳೀಯ ರೈಲ್ವೆ ರಕ್ಷಣಾ ಪಡೆಯ ಶ್ರೀಮತಿ ಲಕ್ಷ್ಮಿ ಬಸವರಾಜ್ ಮತ್ತು ಇತರರು ಉಪಸ್ಥಿತರಿದ್ದರು.

# ಮಾದಕ ವಸ್ತುಗಳ ಕಳ್ಳಸಾಗಣೆ, ಮಾರಾಟ ತಡೆಗೆ ಕಠಿಣ ಕ್ರಮ : ಡಿಸಿ



ದಾವಣಗೆರೆ, ಫೆ.21- ಮಾನವ ಸಂಪನ್ಮೂಲ ವಿನಾಶಕಾರಿಯಾದ ಮಾದಕ ವಸ್ತುಗಳ ಕಳ್ಳಸಾಗಣೆ ಮತ್ತು ಮಾರಾಟವನ್ನು ಕಟ್ಟುನಿಟ್ಟಾಗಿ ತಡೆಗಟ್ಟಲು ಕಠಿಣ ಕ್ರಮಕ್ಕೆ ಮುಂದಾಗಲಾಗಿದೆ ಎಂದು ಜಿಲ್ಲಾಧಿಕಾರಿ ಗಂಗಾಧರಸ್ವಾಮಿ ಜಿ.ಎಂ.ತಿಳಿಸಿದರು.

ಇಲ್ಲಿನ ಜಿಲ್ಲಾ ಪೊಲೀಸ್ ಅಧೀಕ್ಷಕರ ಕಚೇರಿ ಸಭಾಂಗಣದಲ್ಲಿ ಇಂದು ನಡೆದ ಮಾದಕ ದ್ರವ್ಯಗಳ ತಡೆ ಸಮನ್ವಯ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮಾದಕ ವಸ್ತುಗಳಾದ ಗಾಂಜಾ, ಅಫೀಮು, ಬ್ರೌನ್ ಶುಗರ್ ಸೇರಿದಂತೆ ಮಾದಕ ದ್ರವ್ಯಗಳ ಮಾರಾಟ ಕಾನೂನು ಬಾಹಿರವಾದ ಕೃತ್ಯವಾಗಿದೆ. ಈ ದ್ರವ್ಯಗಳನ್ನು ಯುವಜನರಿಗೆ ನೀಡುವ ಮೂಲಕ ಇದರ ದಾಸರನ್ನಾಗಿ ಮಾಡುವ ಕೆಲವಸವನ್ನು ಮಾಡುವರು. ಹೆಚ್ಚಾಗಿ ಕಾಲೇಜು ವಿದ್ಯಾರ್ಥಿಗಳನ್ನು ಗುರಿಯಾಗಿಸಿ ಮಾರಾಟ ಮಾಡುವುದನ್ನು ಕಾಣಬಹುದಾಗಿದೆ. ಇಂತಹ ಮಾದಕ ದ್ರವ್ಯಗಳಿಗೆ ಬಲಿಯಾದಲ್ಲಿ ಇದರಿಂದ ಹೊರಬರುವುದು ಕಷ್ಟಕರವಾಗುತ್ತದೆ.

ಮಾದಕ ವಸ್ತುಗಳ ಬಳಕೆಯನ್ನು ತಡೆಗಟ್ಟುವುದು ಸಮಾಜದ ಎಲ್ಲರ ಜವಾಬ್ದಾರಿಯಾಗಿದೆ. ಇದರ ಮಾರಾಟ ಮತ್ತು ಸಾಗಣೆ ಕಾನೂನು ಬಾಹಿರವಾಗಿದ್ದರೂ ಅಲ್ಲಲ್ಲಿ ಇಂತಹ ಸೇವನೆ ಪ್ರಕರಣಗಳು ವರದಿಯಾಗುತ್ತಿವೆ. ಜನವರಿ ತಿಂಗಳಲ್ಲಿಯೇ 40 ಪ್ರಕರಣಗಳು ವರದಿಯಾಗಿವೆ. ಇದರಲ್ಲಿ 14 ಪ್ರಕರಣಗಳು ಆಜಾದ್ ನಗರ ಠಾಣೆ ವ್ಯಾಪ್ತಿಯಲ್ಲಿ ನಡೆದಿವೆ. 5 ವಿದ್ಯಾನಗರ, 8 ಸಿಇಎನ್ ಠಾಣೆಯಿಂದ, 5 ಹರಿಹರ ನಗರ ಠಾಣೆ ವ್ಯಾಪ್ತಿಯಲ್ಲಿ ಪ್ರಕರಣಗಳು ದಾಖಲಾಗಿವೆ.

ಶಾಲಾ, ಕಾಲೇಜು, ಹಾಸ್ಟೆಲ್ ಗಳ ಸುತ್ತಮುತ್ತಲಿನ ಪ್ರದೇಶದಲ್ಲಿ ಯಾವುದೇ ಅಂಗಡಿ ಮುಂಗಟ್ಟುಗಳಲ್ಲಿ ಮಾದಕ ವಸ್ತುಗಳ ಮಾರಾಟವಾಗುತ್ತಿದ್ದಲ್ಲಿ ಆಯಾ ಶಾಲೆ, ಕಾಲೇಜಿನವರೇ ಕ್ರಮ ಕೈಗೊಳ್ಳಬಹುದು. ತಮಗೆ ಕ್ರಮ ಕೈಗೊಳ್ಳಲು ಆಗದಿದ್ದಲ್ಲಿ ಪೊಲೀಸ್ ಇಲಾಖೆ ಅಥವಾ ಜಿಲ್ಲಾಧಿಕಾರಿಗಳ ಕಚೇರಿಗೆ ಮಾಹಿತಿ ನೀಡಿದಲ್ಲಿ ಅಂತಹವರ ಮಾಹಿತಿಯನ್ನು ಗೋಪ್ಯವಾಗಿಡಲಾಗುತ್ತದೆ ಎಂದರು.

**ಮೆಡಿಕಲ್ ಶಾಪ್ ಪರಿಶೀಲಿಸಲು ಸೂಚನೆ;** ಜಿಲ್ಲಾ ಔಷಧ ನಿಯಂತ್ರಕ ಅಧಿಕಾರಿಗಳು ಮೆಡಿಕಲ್ ಶಾಪ್‌ಗಳಲ್ಲಿ ನಿಯಮಬದ್ದವಾಗಿ ಔಷಧಗಳನ್ನು ಮಾರಾಟ ಮಾಡಬೇಕು. ಆದರೆ ಯಾವುದೇ ವೈದ್ಯರ ಸಲಹೆ ಇಲ್ಲದೇ ಸ್ಟಿರಾಯ್ಡ್ ಇರುವ ಔಷಧಗಳನ್ನು ವಿತರಣೆ ಮಾಡಬಾರದು. ಇದರ ಬಗ್ಗೆ ಕಟ್ಟುನಿಟ್ಟಿನ ಕ್ರಮ ಜರುಗಿಸುವ ಜೊತೆಗೆ ಕೈಗೊಂಡ ಕ್ರಮದ ಬಗ್ಗೆ ಸಾರ್ವಜನಿಕರಿಗೆ ತಿಳಿಯುವಂತೆ ಪ್ರಕಟಣೆ ನೀಡಲು ಸೂಚನೆ ನೀಡಿದರು.

ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಶ್ರೀಮತಿ ಉಮಾ ಪ್ರಶಾಂತ್ ಮಾತನಾಡಿ, ಮಾದಕ ವಸ್ತುಗಳ ಸಾಗಣೆ, ಮಾರಾಟದ ಬಗ್ಗೆ ಸಾರ್ವಜನಿಕರು, ಸಂಘ, ಸಂಸ್ಥೆಯವರು ಮಾಹಿತಿಯನ್ನು ನೀಡಬಹುದಾಗಿದೆ. ಮಾದಕ ವಸ್ತುಗಳಿಂದ ಯುವ ಜನಾಂಗದ ಭವಿಷ್ಯ ಹಾಳಾಗುತ್ತಿದೆ. ಆದ್ದರಿಂದ ಇದನ್ನು ತಡೆಗಟ್ಟಲು ಎಲ್ಲರೂ ಮುಂದೆ ಬರಬೇಕಾಗಿದೆ ಎಂದರು.

ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ವಿಜಯ ಕುಮಾರ್ ಎಂ.ಸಂತೋಷ್, ಮಂಜುನಾಥ್, ಉಪವಿಭಾಗಾಧಿಕಾರಿ ಸಂತೋಷ್ ಪಾಟೀಲ್ ಹಾಗೂ ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

## ರೈಲ್ವೆ ಸ್ಟೇಷನ್‌ನಲ್ಲಿ ನಿಗಾವಹಿಸಿ

ಬಿಹಾರ, ಒರಿಸ್ಸಾ, ಉತ್ತರ ಪ್ರದೇಶದ ಕಡೆಯಿಂದ ದಾವಣಗೆರೆಗೆ ಮಾದಕ ವಸ್ತುಗಳ ಸಾಗಣೆಯಾಗುತ್ತಿದೆ ಎಂಬ ಮಾಹಿತಿ ಇದ್ದು ರೈಲ್ವೆ ನಿಲ್ದಾಣಗಳಲ್ಲಿ ಅನುಮಾನಾಸ್ಪದ ವ್ಯಕ್ತಿಗಳ ತಪಾಸಣೆ ಮಾಡಬೇಕೆಂದು ರೈಲ್ವೆ ಪೊಲೀಸ್ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಗಂಗಾಧರ ಸ್ವಾಮಿ ಸೂಚನೆ ನೀಡಿದರು.

# ಕೊಳಗೇರಿ ನಿವಾಸಿಗಳಿಗೆ ಶೀಘ್ರವೇ ಮನೆ ಹಸ್ತಾಂತರಿಸಲು ಸೂಚನೆ



ದಾವಣಗೆರೆ, ಫೆ. 21- ನಗರದ ಕೊಳಗೇರಿ ಅಭಿವೃದ್ಧಿ ಮಂಡಳಿ ಉಪ ವಿಭಾಗ ವ್ಯಾಪ್ತಿಯಲ್ಲಿ ಕೈಗೊಂಡಿರುವ ಪ್ರಧಾನಮಂತ್ರಿ ಆವಾಜ್ ಯೋಜನೆಯ ಅಡಿಯಲ್ಲಿ (ಸರ್ವರಿಗೂ ಸೂರು) ನಿರ್ಮಿಸುತ್ತಿರುವ ಮನೆಗಳ, ಕೊಳಗೇರಿ ಪ್ರದೇಶಗಳಲ್ಲಿನ ನಿವಾಸಿಗಳಿಗೆ ಹಕ್ಕು ಪತ್ರ ವಿತರಣೆ, ಕೊಳಚೆ ಪ್ರದೇಶಗಳನ್ನು ಗುರುತಿಸಿ, ಘೋಷಣೆ ಹೊರಡಿಸಲು ಪ್ರಸ್ತಾವನೆ ಸಲ್ಲಿಸುವ ಬಗ್ಗೆ ಕೊಳಗೇರಿ ಅಭಿವೃದ್ಧಿ ಮಂಡಳಿ ಉಪ ವಿಭಾಗದ ಕಚೇರಿಯಲ್ಲಿ ಇಂದು ಸಭೆ ನಡೆಯಿತು.

ಈ ಸಂಬಂಧ ಕೊಳಗೇರಿ ಅಭಿವೃದ್ಧಿ ಮಂಡಳಿ ವಿಭಾಗ ಕಛೇರಿ ಹಾಗೂ ಉಪ ವಿಭಾಗ ಕಛೇರಿಯ ಅಧಿಕಾರಿ ಮತ್ತು ನೌಕರರುಗಳೊಂದಿಗೆ ಬೆಂಗಳೂರಿನ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಆಯುಕ್ತ ಡಾ. ಡಿ.ಆರ್. ಅಶೋಕ್ ಅವರು ಸಭೆಯಲ್ಲಿ ಪಾಲ್ಗೊಂಡು ನಿರ್ದೇಶನ ನೀಡಿದರು. ನಿಗದಿತ ಕಾಲಾವಧಿಯೊಳಗೆ ಕಾಮಗಾರಿಗಳನ್ನು ಪೂರ್ಣಗೊಳಿಸಿ, ಫಲಾನುಭವಿಗಳಿಗೆ ಹಸ್ತಾಂತರಿಸಲು ಅಶೋಕ್ ಸೂಚಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಮುಖ್ಯ ಅಭಿಯಂತರ ಹೆಚ್.ಪಿ. ಸುಧೀರ್, ಮಂಡಳಿ ನಿರ್ದೇಶಕರುಗಳಾದ ರಶೀದ್, ವಿನಯ್ ಕುಮಾರ್ ಮತ್ತು ಕೊಳಗೇರಿ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರ ಆಪ್ತ ಕಾರ್ಯದರ್ಶಿ ಮುನಿರಾಜ್ ಎಇಇ, ಟಿ.ಎಂ. ನಾಗರಾಜು ಮತ್ತು ಇತರರು ಉಪಸ್ಥಿತರಿದ್ದರು.

# ನಗರದಲ್ಲಿ ಶಿವಾಜಿ ಜಯಂತಿ ಆಚರಣೆ



ದಾವಣಗೆರೆ, ಫೆ. 21 - ನಗರದ ಪಿ.ಹಾಲೇಶಪ್ಪ ರಸ್ತೆಯಲ್ಲಿರುವ ರೈಲ್ವೆ ಕೆಳ ಸೇತುವೆ ಬಳಿಯ ಶ್ರೀ ಛತ್ರಪತಿ ಶಿವಾಜಿ ಮೂರ್ತಿಗೆ ಪುಷ್ಪಾರ್ಚನೆ ಮಾಡುವುದರ ಮೂಲಕ ಶಿವಾಜಿ ಜಯಂತಿಯನ್ನು ಆಚರಿಸಲಾಯಿತು. ಉಪಮಹಾಪೌರರಾದ ಸೋಗಿ ಶಾಂತಕುಮಾರ್, ನಗರ ಪಾಲಿಕೆ ಮಾಜಿ ಸದಸ್ಯ ಪಿ.ಎನ್. ಚಂದ್ರಶೇಖರ್, ಪಿ.ಹೆಚ್. ರಾಜೇಶ್, ಸುಧೀರ ಮಾನೆ, ಎಸ್. ರವಿ, ಪಿ.ಹೆಚ್. ಮಹೇಶ, ಕನ್ನಡ ಹೋರಾಟಗಾರ ಪಿ. ಮಂಜುನಾಥ, ಬೆಂಡಿಗೆರೆ ವಿಜಯಕುಮಾರ್, ಕೆ. ಬಸವರಾಜ ಮಾನೆ, ವೆಂಕಟೇಶ್ ರಾಟೆ, ಚೌಡಪ್ಪ, ಪಕ್ಕೀರೇಶ ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು.

# ಕೊಟ್ಟೂರು ಪಾದಯಾತ್ರೆ ನಡೆಸಿದ ವಿಜಯನಗರ ಜಿಲ್ಲಾಧಿಕಾರಿ ದಿವಾಕರ್



ಕೊಟ್ಟೂರು ತಾಲ್ಲೂಕಿನ ಆದಿ ದೈವ ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿಯ ರಥೋತ್ಸವ ಇಂದು ನಡೆಯಲಿದ್ದು, ನಾಡಿನ ನಾನಾ ಕಡೆಯಿಂದ ಲಕ್ಷ ಲಕ್ಷ ಭಕ್ತರು ಪಾದಯಾತ್ರೆಯ ಮೂಲಕ ಆಗಮಿಸಿ, ಸ್ವಾಮಿಯ ದರ್ಶನ ಪಡೆಯುತ್ತಿದ್ದಾರೆ. ವಿಜಯನಗರ ಜಿಲ್ಲಾಧಿಕಾರಿ ಎಂ.ಎಸ್. ದಿವಾಕರ್ ಇಂದು ಸಂಜೆ 5 ಗಂಟೆಯಿಂದ ಕೆ. ಅಯ್ಯನಹಳ್ಳಿ ಗ್ರಾಮದಿಂದ ಕೊಟ್ಟೂರಿಗೆ ಪಾದಯಾತ್ರೆಯ ಮಾಡುವ ಮೂಲಕ ಭಕ್ತಿಯನ್ನು ಸಲ್ಲಿಸಲಿದ್ದಾರೆ. ಅವರ ಜೊತೆಗೆ ತಹಶೀಲ್ದಾರ್ ಜಿ.ಕೆ. ಅಮರೇಶ, ಮುಖ್ಯಾಧಿಕಾರಿ ನಸರುಲ್ಲಾ, ಶ್ರೀ ಗುರು ಕೊಟ್ಟೂರೇಶ್ವರ ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿ ಹನುಮಂತಪ್ಪ ಭಾಗವಹಿಸಲಿದ್ದಾರೆ.



# ಕೊಟ್ಟೂರಿಗೆ ಶ್ರೀರಾಮುಲು ಪಾದಯಾತ್ರೆ

ಮಾಜಿ ಸಚಿವ ಬಿ. ಶ್ರೀರಾಮುಲು ಅವರು ಕೂಡ್ಲಿಗಿ ಪಟ್ಟಣದಿಂದ ಶ್ರೀ ಗುರು ಕೊಟ್ಟೂರೇಶ್ವರ ದೇವಸ್ಥಾನಕ್ಕೆ ಪಾದಯಾತ್ರೆ ಕೈಗೊಂಡಿದ್ದಾರೆ.

# ನಗರದಲ್ಲಿ ಇಂದು ಫೌಂಡೇಶನ್ ಡೇ

ಎಂಬಿಎ ಪ್ರೋಗ್ರಾಮ್, ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯ ಮತ್ತು ಬಾಪೂಜಿ ಅಕಾಡೆಮಿ ಆಫ್ ಮ್ಯಾನೇಜ್‌ಮೆಂಟ್ ಅಂಡ್ ರೀಸರ್ಚ್ ಸಹಯೋಗದಲ್ಲಿ 28ನೇ ಫೌಂಡೇಶ್ ಡೇ ಕಾರ್ಯಕ್ರಮವು ಎಂಬಿಎ ಸಭಾಂಗಣದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ನಡೆಯಲಿದೆ ಎಂದು ಎಂಬಿಎ ಕಾಲೇಜು ನಿರ್ದೇಶಕ ಡಾ. ಹೆಚ್.ವಿ. ಸ್ವಾಮಿ ತ್ರಿಭುವನಾನಂದ ತಿಳಿಸಿದ್ದಾರೆ.

ಡಾ. ಅಥಣಿ ಎಸ್.ವೀರಣ್ಣ ಅಧ್ಯಕ್ಷತೆ ವಹಿಸಲಿದ್ದಾರೆ. ಬೆಂಗಳೂರಿನ ಎಸ್.ವಿ. ವೆಂಕಟೇಶ್ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ.

# ಜಗಳೂರು : ಇಂದು ವಿದ್ಯುತ್ ವ್ಯತ್ಯಯ

ದಾವಣಗೆರೆ - ಜಗಳೂರು ಮತ್ತು ಬಿದರಕೆರೆ ವಿ.ವಿ ಕೇಂದ್ರದಲ್ಲಿ 4ನೇ ತ್ರೈಮಾಸಿಕ ಕಾಮಗಾರಿ ನಿರ್ವಹಣೆ ಹಮ್ಮಿಕೊಂಡಿರುವುದರಿಂದ ಈ ವ್ಯಾಪ್ತಿಯಲ್ಲಿ ಬರುವ ಜಗಳೂರು ಪಟ್ಟಣ ಮತ್ತು ಎಲ್ಲಾ ಗ್ರಾಮಗಳ ಎನ್‌ಜೆವೈ ಮತ್ತು ಐ.ಪಿ ಮಾರ್ಗಗಳಿಗೆ ಇಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 2.30 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ನ್ಯಾಮತಿಯಲ್ಲಿ ಇಂದು ವಿದ್ಯುತ್ ವ್ಯತ್ಯಯ

ನ್ಯಾಮತಿ, ಕತ್ತಿಗೆ ಮತ್ತು ಚೀಲೂರು ಗ್ರಾಮಗಳಿಗೆ ಇಂದು ಬೆಳಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ಬಸವ ಭಕ್ತರನ್ನು ನಿಂದಿಸಿದ ಶ್ರೀ ವಿರುದ್ಧ ಕ್ರಮಕ್ಕೆ ಶರಣ ಸಾಹಿತ್ಯ ಪರಿಷತ್ ಆಗ್ರಹ



ದಾವಣಗೆರೆ, ಫೆ.21- ಬಸವ ಭಕ್ತರನ್ನು ನಿಂದಿಸಿದ ಕನ್ನೇರಿ ಮಠದ ಕಾಡಸಿದ್ದೇಶ್ವರ ಸ್ವಾಮೀಜಿ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿ ಉಪ ವಿಭಾಗಾಧಿಕಾರಿಗಳಿಗೆ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ತಾಲ್ಲೂಕು ಘಟಕ ಶುಕ್ರವಾರ ಮನವಿ ಸಲ್ಲಿಸಿತು.

ಈ ವೇಳೆ ಮಾತನಾಡಿದ ಪರಿಷತ್ ತಾಲ್ಲೂಕು ಅಧ್ಯಕ್ಷ ಎಸ್.ಬಿ. ರುದ್ರಗೌಡ ಗೋಪನಾಳ್ ಅವರು, ಇತ್ತೀಚೆಗೆ ನ್ಯೂಸ್ ಚಾನೆಲ್ ಒಂದರಲ್ಲಿ ಬಸವ ಧರ್ಮದ ತತ್ವಗಳನ್ನು ಗಾಳಿಗೆ ತೂರಿ, ಬಸವ ಭಕ್ತರನ್ನು ತಾಲಿಬಾನ್ ಎಂದು ಅವಮಾನಿಸಿರುವ ಕಾಡಸಿದ್ದೇಶ್ವರ ಶ್ರೀಗಳ ನಡೆ ಅತ್ಯಂತ ಖಂಡನೀಯ ಎಂದರು.

ಮನುವಾದಿಗಳ ಕೈಗೊಂಬೆಯಾಗಿ ನಡೆದುಕೊಂಡ ಶ್ರೀಗಳು, ವಿಶ್ವಗುರು ಬಸವಣ್ಣನವರ ಸಿದ್ಧಾಂತ ಮತ್ತು ತತ್ವಗಳಿಗೆ ವಿರುದ್ಧವಾಗಿ ಹೇಳಿಕೆ ನೀಡುತ್ತಿದ್ದಾರೆ. ಕೂಡಲೇ ಇವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ದೇಶದ ಯಾವುದೇ ದಾರ್ಶನಿಕರು, ಹೋರಾಟಗಾರರಿಗೆ ಅವಮಾನ ಮಾಡಿದರೆ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದ ಅವರು, ಬಸವ ಭಕ್ತರ ಬಳಿ ಕ್ಷಮೆ ಯಾಚಿಸುವಂತೆ ಕಾಡಸಿದ್ದೇಶ್ವರ ಶ್ರೀಗಳಿಗೆ ಒತ್ತಾಯಿಸಿದರು.

# ಕಾಂತರಾಜು ಆಯೋಗ : ಹರಿಹರದಲ್ಲಿ ಸಭೆ

ಹರಿಹರ ತಾಲ್ಲೂಕು ಅಹಿಂದ ಹಾಗೂ ಶೋಷಿತ ಸಮುದಾಯಗಳ ವೇದಿಕೆಯಿಂದ ಇಂದು ಬೆಳಿಗ್ಗೆ 11ಕ್ಕೆ ಎಂಕೆಇಟಿ, ಸಿಬಿಎಸ್‌ಸಿ ಶಾಲೆ ಪಕ್ಕದ ಯಶಸ್ವಿನಿ ಕನ್‌ವೆನ್ಷನಲ್ ಹಾಲ್‌ನಲ್ಲಿ ಕಾಂತರಾಜು ಆಯೋಗದ ವರದಿ ಬಿಡುಗಡೆಗೆ ಹಾಗೂ ಅನುಷ್ಠಾನಕ್ಕೆ ಆಗ್ರಹಿಸಿ ನಡೆಸಬೇಕಾದ ಹೋರಾಟದ ಪೂರ್ವಭಾವಿ ಸಭೆ ಆಯೋಜಿಸಿದೆ. ತಾಲ್ಲೂಕಿನ ಹಿಂದುಳಿದ ಸಮುದಾಯಗಳ ಸಮಾಜ, ಸಂಘ, ಸಂಸ್ಥೆಗಳ ಅಧ್ಯಕ್ಷರು, ಪದಾಧಿಕಾರಿಗಳು ಮಹತ್ವದ ಈ ಸಭೆಯಲ್ಲಿ ಭಾಗವಹಿಸುವಂತೆ ಎಚ್.ನಿಜಗುಣ (9844413151), ಎಚ್.ಕೆ. ಕೊಟ್ರಪ್ಪ (9900910101) ತಿಳಿಸಿದ್ದಾರೆ.

# ನಗರದಲ್ಲಿ ಇಂದು ಪ್ರೋತ್ಸಾಹ ಧನ ವಿತರಣೆ

ದಾವಣಗೆರೆ, ಫೆ.21- ನಗರದ ಶ್ರೀ ಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ ಹಿರೇಮಠದಲ್ಲಿ ನಾಳೆ ದಿನಾಂಕ 22ರ ಶನಿವಾರ ಸಂಜೆ 6.15ಕ್ಕೆ ಪಾಲಿಕೆ ಮಾಜಿ ಸದಸ್ಯ ಕೆ.ಪ್ರಸನ್ನ ಕುಮಾರ್ ಜನ್ಮದಿನದ ಅಂಗವಾಗಿ ನಮ್ಮ ದಾವಣಗೆರೆ ಫೌಂಡೇಷನ್ ವತಿಯಿಂದ ಪೌರ ಕಾರ್ಮಿಕರ ಮಕ್ಕಳಿಗೆ ಪ್ರೋತ್ಸಾಹ ಧನ ವಿತರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಶುಕ್ರವಾರ ಈ ಬಗ್ಗೆ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದ ಫೌಂಡೇಷನ್ ಕಾರ್ಯದರ್ಶಿ ಪವನ್ ರೇವಣ್ಕರ್, ಇದೇ ವೇಳೆ 'ನಮ್ಮ ದಾವಣಗೆರೆ ಫೌಂಡೇಷನ್'ಗೆ ಅಧಿಕೃತ ಚಾಲನೆ ನೀಡಲಾಗುವುದು. ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು ಎಂದು ತಿಳಿಸಿದರು. ಪತ್ರಿಗೋಷ್ಠಿಯಲ್ಲಿ ಸಿ.ಚೇತನ್, ಅಂಬರೀಶ್, ವಿನಯ್ ದಿಳ್ಳೆಪ್ಪ, ಸಚಿನ್ ವೆರ್ಣೇಕರ್, ವಿಕಾಸ್ ಇದ್ದರು.


## PUBLIC NOTICE
## TO WHOMSOEVER IT MAY CONCERN

This is to inform the General Public that following share certificate of **Godrej Consumer Products Ltd** having its Registered Office at Godrej One 4th floor, Pirojshanagar, Eastern Express Highway, Vikhroli (East), Mumbai 400 079, India registered in the name of the following Shareholder/s have been lost by them.

| Sr. No. | Name of the Shareholder/s | Folio No. | certificate No./s | Distinctive Number/s | No. of Shares |
|---|---|---|---|---|---|
| 1 | B M Halasiddappa | 0324522 | 531308 | 66639013 to 66639612 | 600 |

The Public are hereby cautioned against purchasing or dealing in any way with the above referred share certificates.

Any person who has any claim in respect of the said share certificate/s should lodge such claim with the Company or its Registrar and Transfer Agents **Link Intime India Private Limited 247 Park, C-101, 1st Floor, L. B. S. Marg, Vikhroli (W) Mumbai-400083 TEL: 8108116767** within 15 days of publication of this notice after which no claim will be entertained and the Company shall proceed to issue Duplicate Share Certificate/s.

Place: Davangere
Date: 21-02-2025

Name of Legal Claimant:
**B G SUSHEELAMMA**

## WANTED/ಕೆಲಸಕ್ಕೆ ಬೇಕಾಗಿದ್ದಾರೆ

Wholesale ಔಷಧಿ ಅಂಗಡಿಗೆ
ಪುರುಷರು/ಹುಡುಗರು ಕೆಲಸಕ್ಕೆ ಬೇಕಾಗಿದ್ದಾರೆ.
Qualification : (SSLC, PUC) English ಓದಲು ಬರಬೇಕು

**A.K. Pharma ಎ.ಕೆ. ಫಾರ್ಮಾ**
ಹದಡಿ ರಸ್ತೆ, ತರಳಬಾಳು ಸ್ಕೂಲ್ ಎದುರು, ಶ್ರೀನಿವಾಸ ನಗರ, ದಾವಣಗೆರೆ.
ಫೋ : 88678 56784, 99643 75596


# ಐದು ದಿನಗಳ ಬ್ಯಾಂಕಿಂಗ್ ವ್ಯವಸ್ಥೆ ಜಾರಿಗೆ ತರಲು ಬ್ಯಾಂಕ್ ಉದ್ಯೋಗಿಗಳ ಪ್ರತಿಭಟನೆ




ದಾವಣಗೆರೆ, ಫೆ. 21 - ಬ್ಯಾಂಕುಗಳಲ್ಲಿ ಅಗತ್ಯ ನೇಮಕಾತಿ ಮಾಡಬೇಕು, ಐದು ದಿನಗಳ ಬ್ಯಾಂಕಿಂಗ್ ವ್ಯವಸ್ಥೆ ಜಾರಿಗೆ ತರಬೇಕು, ತಾತ್ಕಾಲಿಕ ನೌಕರರನ್ನು ಖಾಯಂಗೊಳಿಸಬೇಕು, ಉದ್ಯೋಗ ಭದ್ರತೆಯನ್ನು ರಕ್ಷಿಸಬೇಕು, ಬ್ಯಾಂಕ್ ಉದ್ಯೋಗಿಗಳ ಮೇಲಾಗುತ್ತಿರುವ ದಾಳಿಯಿಂದ ನೌಕರರನ್ನು ರಕ್ಷಿಸಬೇಕು, ಐಡಿಬಿಐ ಬ್ಯಾಂಕಿನಲ್ಲಿ ಸರ್ಕಾರಿ ಬಂಡವಾಳವನ್ನು ಶೇಕಡಾ 51 ಕ್ಕಿಂತ ಹೆಚ್ಚಿರಬೇಕು, ಬ್ಯಾಂಕಿಂಗ್ ಸೇವೆಗಳನ್ನು ಹೊರಗುತ್ತಿಗೆ ನೀಡಬಾರದು ಹಾಗೂ ಇನ್ನಿತರೆ ಹಲವಾರು ಬೇಡಿಕೆಗಳನ್ನು ಈಡೇರಿಸುವಂತೆ ಸರ್ಕಾರವನ್ನು ಆಗ್ರಹಿಸಿ ಬ್ಯಾಂಕ್ ಕಾರ್ಮಿಕ ಸಂಘಟನೆಗಳ ಸಂಯುಕ್ತ ವೇದಿಕೆಯ ದಾವಣಗೆರೆ ಜಿಲ್ಲಾ ಸಮಿತಿ ವತಿಯಿಂದ ಬ್ಯಾಂಕ್ ನೌಕರರು ಹಾಗೂ ಅಧಿಕಾರಿ ಸಮೂಹ ನಗರದ ಮಂಡಿಪೇಟೆ ಕೆನರಾ ಬ್ಯಾಂಕ್ ಮುಂಭಾಗದಲ್ಲಿ ಇಂದು ಪ್ರತಿಭಟನಾ ಮತ ಪ್ರದರ್ಶನ ನಡೆಸಿದರು.

ಯುಎಫ್‌ಬಿಯು ದಾವಣಗೆರೆ ಜಿಲ್ಲಾ ಸಂಚಾಲಕ ಕೆ.ರಾಘವೇಂದ್ರ ನಾಯರಿ ಮಾತನಾಡಿ, ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಸರ್ಕಾರವನ್ನು ಒತ್ತಾಯಿಸಲು ಮುಂಬರುವ ಮಾರ್ಚ್ ತಿಂಗಳ 24 ಮತ್ತು 25 ರಂದು ಅಖಿಲ ಭಾರತ ಬ್ಯಾಂಕ್ ಮುಷ್ಕರಕ್ಕೆ ಕರೆ ನೀಡಲಾಗಿದೆ. ಮುಷ್ಕರಕ್ಕೆ ಪೂರ್ವಭಾವಿಯಾಗಿ ಇಂದು ದೇಶದಾದ್ಯಂತ ಬ್ಯಾಂಕ್ ಉದ್ಯೋಗಿಗಳಿಂದ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಈ ಪ್ರತಿಭಟನಾ ಮತ ಪ್ರದರ್ಶನ ಆಯೋಜಿಸಲಾಗಿದೆ ಎಂದರು.

ಮುಷ್ಕರದಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಅಧಿಕಾರಿಗಳ ಸಂಘದ ಪ್ರಾದೇಶಿಕ ಕಾರ್ಯದರ್ಶಿ ಆರ್.ಶಂಕರಪ್ಪ, ಚಿತ್ರದುರ್ಗ ಮಹೇಶ್ವರಪ್ಪ, ನಿವೃತ್ತ ಬ್ಯಾಂಕ್ ನೌಕರರ ಸಂಘದ ಹೆಚ್. ಸುಗೀರಪ್ಪ ಭಾಗವಹಿಸಿ ಮುಷ್ಕರ ನಿರತರನ್ನು ಉದ್ದೇಶಿಸಿ ಮಾತನಾಡಿದರು.

ಮುಷ್ಕರದ ನೇತೃತ್ವವನ್ನು ಯುನೈಟೆಡ್ ಫೋರಮ್ ಆಫ್ ಬ್ಯಾಂಕ್ ಯೂನಿಯನ್ಸ್‌ನ ಸದಸ್ಯ ಸಂಘಟನೆಗಳ ನಾಯಕರುಗಳಾದ ಆರ್. ಆಂಜನೇಯ, ಹೆಚ್.ಎಸ್.ತಿಪ್ಪೇಸ್ವಾಮಿ, ಪ್ರದೀಪ್ ಪಾಟೀಲ್, ಸುನಿಲ್‌ಕುಮಾರ್ ಎಸ್. ಮ್ಯಾಗೇರಿ, ಎಂ.ಎಸ್. ವಾಗೀಶ್, ಕೆ. ಗಂಗಾಧರ್, ದುರ್ಗಪ್ಪ, ಎಂ.ಡಿ. ವಿದ್ಯಾಸಾಗರ್, ಪರಶುರಾಮ, ಕೆ. ಜಯಲಕ್ಷ್ಮಿ, ಎನ್.ಜಿ. ಉಷಾ, ನಿಶಾ ಪಿಂಟೋ, ಭಾರತಿ, ಹೆಚ್.ಜೆ. ಆಶಾ, ರೇಣುಕಮ್ಮ, ಜೆ.ಟಿ. ಶಕ್ತಿಪ್ರಸಾದ್, ಗಾಯತ್ರಿ ಮುಂತಾದವರು ಭಾಗವಹಿಸಿದ್ದರು.


## ಹುಟ್ಟು ಹಬ್ಬದ ಶುಭಾಶಯಗಳು



ಅಂದು ವಿದ್ಯಾರ್ಥಿಗಳ ಮತ್ತು ಯುವ ಜನರ ಧ್ವನಿಯಾಗಿ, ಇಂದು ಸಂಪೂರ್ಣ ಸಮಾಜದ ಧ್ವನಿಯಾಗಿರುವ, ನಮ್ಮ ಆತ್ಮೀಯ ಸಹೋದರ, 24 ನೇ ವಾರ್ಡಿನ ಪಾಲಿಕೆ ಸದಸ್ಯರು ಹಾಗೂ ನಿಕಟಪೂರ್ವ ವಿರೋಧ ಪಕ್ಷದ ನಾಯಕರಾದ

**ಶ್ರೀ ಪ್ರಸನ್ನಕುಮಾರ್**

ಅವರಿಗೆ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು.



ಇಂಜಿನಿಯರ್ ಪಾಣಿ ಸ್ವಾಮಿ
ಕಿರಣ್ ಕುಮಾರ್ ಜೆ

## ಹೃತ್ಪೂರ್ವಕ ಅಭಿನಂದನೆಗಳು



ಶ್ರೀ ಎನ್. ರಂಗಸ್ವಾಮಿ, ವಕೀಲರು, ಅಧ್ಯಕ್ಷರು

ಸವಿತಾ ಕ್ರೆಡಿಟ್ ಕೋ-ಆಪ್ ಸೊಸೈಟಿ ನಿಯಮಿತದ ಪದಾಧಿಕಾರಿಗಳ ಚುನಾವಣೆಯಲ್ಲಿ



ಶ್ರೀ ಜಿ.ಸಿ. ಶ್ರೀನಿವಾಸ್, ಉಪಾಧ್ಯಕ್ಷರು

ಅವಿರೋಧವಾಗಿ ಆಯ್ಕೆಯಾದ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸಂಘದ ಆಡಳಿತ ಮಂಡಳಿ ನಿರ್ದೇಶಕರುಗಳಿಗೆ ಹೃತ್ಪೂರ್ವಕ ಅಭಿನಂದನೆಗಳು.



ಶ್ರೀ ಸಿ. ರಾಮಾಂಜನೇಯ, ನಿರ್ದೇಶಕರು | ಶ್ರೀ ಜೆ. ಮಂಜುನಾಥ್, ನಿರ್ದೇಶಕರು | ಶ್ರೀ ಎನ್. ಗೋವಿಂದರಾಜ್, ನಿರ್ದೇಶಕರು | ಶ್ರೀ ಜಿ.ಆರ್. ಪಾಂಡುರಂಗ ವಿಠ್ಠಲ, ನಿರ್ದೇಶಕರು



ಶ್ರೀ ಜಿ.ಟಿ. ಮಂಜುನಾಥ, ನಿರ್ದೇಶಕರು | ಶ್ರೀ ಎಂ. ಗಂಗಾಧರ, ನಿರ್ದೇಶಕರು | ಶ್ರೀಮತಿ ಸುವರ್ಣ, ನಿರ್ದೇಶಕರು | ಶ್ರೀಮತಿ ಸಂಜೀವಮ್ಮ, ನಿರ್ದೇಶಕರು

ಶುಭಾಶಯ ಕೋರುವವರು

✦ಶ್ರೀಮತಿ ಶಾರದಮ್ಮ ದಿ. ಶ್ರೀ ಖುಷಿರಾಜ್
✦ಶ್ರೀಮತಿ ಶಿಲ್ಪಾ ಶ್ರೀ ಪಾಂಡು ರಂಗವಿಠ್ಠಲ
ಹಾಗೂ ಸನ್ನಿದಿ, ಧನ್ಯ, ವಶಿಷ್ಟ ✦ಶ್ರೀಮತಿ ಪದ್ಮಾವತಿ ಶ್ರೀ ನರಸಿಂಹ
✦ಶ್ರೀಮತಿ ರೇಣುಕಾ ಶ್ರೀ ರಾಜಶೇಖರ್ ✦ಶ್ರೀಮತಿ ಗಾಯತ್ರಿ ಶ್ರೀ ಜಿಂದಣ್ಣ
✦ಶ್ರೀಮತಿ ಚೈತ್ರ ಶ್ರೀ ದಾನಪ್ಪ ✦ಶ್ರೀ ಪರುಶುರಾಮ್
✦ಶ್ರೀ ರಘುನಂದನ್ ✦ಶ್ರೀಮತಿ ವಿದ್ಯಾ ದಿ. ಶ್ರೀ ಗಿರಿಧರ್
✦ಶ್ರೀಮತಿ ಜ್ಯೋತಿ ಶ್ರೀ ವೇಣುಗೋಪಾಲ್
✦ಶ್ರೀ ಮಧುಸೂದನ್ ✦ಶ್ರೀ ದೀಪಕ್ ✦ಶ್ರೀ ಮುರುಳಿ
✦ಶ್ರೀ ಅನಿಲ್ ಕುಮಾರ್ ✦ಶ್ರೀ ದರ್ಶನ್
ಹಾಗೂ ಸಮಸ್ತ ವಲ್ಲೂರು ಕುಟುಂಬದ ಸದಸ್ಯರು

## 6ನೇ ವಾರ್ಡ್‌ನಲ್ಲಿ ಎಸ್ಸೆಸ್ಸೆಂರಿಂದ ವಾಚನಾಲಯದ ಉದ್ಘಾಟನೆ



ದಾವಣಗೆರೆ, ಫೆ. 21 - ಮಹಾನಗರ ಪಾಲಿಕೆ 6ನೇ ವಾರ್ಡಿನಲ್ಲಿ ನಗರ ಪಾಲಿಕೆಯಿಂದ ಸ್ಥಾಪಿಸಿರುವ ವಾಚನಾಲಯವನ್ನು ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಉದ್ಘಾಟಿಸಿದರು. 6ನೇ ವಾರ್ಡ್ ಪಾಲಿಕೆ ಸದಸ್ಯ ಎಲ್.ಡಿ ಗೋಣೆಪ್ಪ, ಮಹಾಪೌರರಾದ ಕೆ. ಚಮನ್‌ಸಾಬ್, ಸ್ಥಾಯಿ ಸಮಿತಿ ಅಧ್ಯಕ್ಷರುಗಳಾದ ಆಶಾ ಉಮಾಶಂಕರ್, ಸವಿತಾ ಹುಲ್ಲುಮನೆ, ಸುಧಾ ಇಟ್ಟಿಗುಡಿ, ಪಾಲಿಕೆ ಆಯುಕ್ತರಾದ ಶ್ರೀಮತಿ ರೇಣುಕಾ, ಮಾಜಿ ಮೇಯರ್ ಗೋಣೆಪ್ಪ, ನಗರಸಭೆ ಮಾಜಿ ಅಧ್ಯಕ್ಷ ಮಂಜುನಾಥ, ಮುಖಂಡ ಜೆ.ಡಿ. ಪ್ರಕಾಶ್, ದೂಡಾ ಮಾಜಿ ಅಧ್ಯಕ್ಷ ಮಹಾಂತೇಶ್, ಎಪಿಎಂಸಿ ಮಾಜಿ ಅಧ್ಯಕ್ಷ ಗೌಡ್ರ ಗಿರೀಶ್, ಜೆಡಿಎಸ್ ಜಯ್ಯಪ್ಪ, ನೀಲಪ್ಪ, ಟಿ. ರಮೇಶ್, ಜಮ್ಮನಹಳ್ಳಿ, ನಾಗರಾಜ್, ಎಲ್.ಜಿ. ಬಸವರಾಜ್ ಇನ್ನಿತರರಿದ್ದರು.


ಬೇಕಾಗಿದ್ದಾರೆ

ನಮ್ಮ ಶೋ ರೂಮ್‌ನಲ್ಲಿ ಸೇಲ್ಸ್ ಮಾಡಲು ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.

ಶಾಂತಲಾ
ದಿ ವೆಡ್ಡಿಂಗ್ ಮಾಲ್...

ಚಾಮರಾಜ್ ಪೇಟೆ, ದಾವಣಗೆರೆ.
ಮೊ. : 96861 95327





ಅಭಿನಂದನೆಗಳು

ಜಗಳೂರು ತಾಲ್ಲೂಕು ದಿದ್ದಿಗೆ ಗ್ರಾಮದ,
ಸರ್ಕಾರಿ ಪ್ರೌಢಶಾಲೆಯ
ಕನ್ನಡ ಭಾಷಾ ಶಿಕ್ಷಕರೂ,
ಹಿರಿಯ ಸಾಹಿತಿಗಳೂ ಆದ
ಶ್ರೀಮತಿ ಸೌಮ್ಯ ದಯಾನಂದ
ಅವರ 'ಸಂಜೆ ಐದರ ಸಂತೆ' ಕವನ
ಸಂಕಲನಕ್ಕೆ ಬೆಂಗಳೂರಿನ ಕನ್ನಡ
ಸಾಹಿತ್ಯ ಪರಿಷತ್ ನೀಡಲ್ಪಡುವ
ಪುರಸ್ಕಾರ ಲಭಿಸಿದೆ.
ಇವರಿಗೆ ಹಾರ್ದಿಕ ಅಭಿನಂದನೆಗಳು.

ಶ್ರೀ ವಿನಾಯಕ ಎಜುಕೇಷನ್ ಸೊಸೈಟಿ (ರಿ) ದಾವಣಗೆರೆ,
ಶ್ರೀ.ಹೆಚ್.ವಿ.ಗೋಪಾಲಪ್ಪ ಹೂವಿನಹೊಳೆ ಕಾರ್ಯದರ್ಶಿಗಳು ಹಾಗೂ
ಶ್ರೀ ಮೌನೇಶ್ವರಿ ಶ್ರವಣ ನ್ಯೂನ್ಯತಾ ಮಕ್ಕಳ ವಸತಿಯುತ ಶಾಲೆಯ ಸಿಬ್ಬಂದಿ ವರ್ಗದವರು.





ಹುಟ್ಟುಹಬ್ಬದ ಶುಭಾಶಯಗಳು



ತಮ್ಮ ಹುಟ್ಟುಹಬ್ಬದ
ಸಂಭ್ರಮದಲ್ಲಿರುವ
ದಾವಣಗೆರೆ ಲಯನ್ಸ್ ಕ್ಲಬ್
ಹಿರಿಯ ನಿರ್ದೇಶಕರೂ,
ಸಮಾಜ ಸೇವಾ
ಕಾರ್ಯಕರ್ತರೂ,
ವರ್ತಕರೂ, ನಮ್ಮ
ಆತ್ಮೀಯರೂ ಆದ
ಶ್ರೀ ಕೋರಿ ಶಿವಕುಮಾರ್
ಅವರಿಗೆ ಜನ್ಮದಿನದ ಹಾರ್ದಿಕ ಶುಭಾಶಯಗಳು. ಭಗವಂತನು ಅವರಿಗೆ
ಆಯುರಾರೋಗ್ಯ-ಐಶ್ವರ್ಯವನ್ನಿತ್ತು ಕಾಪಾಡಲೆಂದು ಪ್ರಾರ್ಥಿಸುವ....

25ನೇ ವಾರ್ಡ್ ಸ್ನೇಹಿತರು ಹಾಗೂ
ಸರ್ವ ಸದಸ್ಯರು, ಲಯನ್ಸ್ ಕ್ಲಬ್, ದಾವಣಗೆರೆ.



ಹುಟ್ಟುಹಬ್ಬದ ಶುಭಾಶಯಗಳು

ಇಂದು ತಮ್ಮ ಜನ್ಮ ದಿನದ
ಸಂಭ್ರಮದಲ್ಲಿರುವ ಅಂದು ವಿದ್ಯಾರ್ಥಿ
ಸಮಸ್ಯೆಗಳಿಗೆ ಧ್ವನಿಯಾದ
ಯುವ ನಾಯಕ, ಇಂದು ಜನ
ಸೇವೆಗೆಂದೇ ಜೀವನವನ್ನು
ಮುಡುಪಾಗಿಟ್ಟಿರುವ ಜನಸೇವಕ
ಹಾಗೂ ವಿರೋಧ ಪಕ್ಷದ
ಮಾಜಿ ಅಧ್ಯಕ್ಷರೂ, 24ನೇ ವಾರ್ಡ್
ಮಹಾನಗರ ಪಾಲಿಕೆ ಸದಸ್ಯರೂ,
ನಮ್ಮ ಆತ್ಮೀಯರೂ ಆದ
ಶ್ರೀ ಕೆ. ಪ್ರಸನ್ನ ಕುಮಾರ್
ಅವರಿಗೆ ಹುಟ್ಟುಹಬ್ಬದ ಹಾರ್ದಿಕ
ಶುಭಾಶಯಗಳು.





ಸಚಿನ್ ಎಸ್.ಜಿ.



ವಿನಯ್ ದಿಳ್ಯಪ್ಪ





ನಮ್ಮೆಲ್ಲರ ನೆಚ್ಚಿನ ಸ್ನೇಹಿತರು, ಅಪರೂಪದ ಯುವ ನಾಯಕರಾದ
ಶ್ರೀ ಪ್ರಸನ್ನ ಕುಮಾರ್ ಕೆ. ರವರಿಗೆ
ಹುಟ್ಟುಹಬ್ಬದ ಹಾರ್ದಿಕ ಶುಭಾಷಯಗಳು
ಶುಭ ಕೋರುವವರು : ಸ್ನೇಹಿತರ ಬಳಗ

ನವರಂಗ್ ಮುದ್ರಣ 8050039392


KA/SK/DVG-028/2024-2026. O/P @ B.V. Nagar P.O. JANATHAVANI - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas